KARNATAKA TAX ON PROFESSIONS, TRADS, CALLINGS AND EMPLOYMENT BILL, 1976.

Motion to Consider

(Debate Continued)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ ವಿಧೇಯಕವನ್ನು ನಾನು ವಿರೋಧಮಾಡುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಒಂದು ಸಾಹಸವನ್ನು ಮಾಡಿದ್ದೇವೆ ಎನ್ನತಕ್ಕ ಮಾತನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅನೇಕ ಸಂದರ್ಭದಲ್ಲಿ ಈ ಒಂದು ಮಾತನ್ನು ಹೇಳುತ್ತಿದ್ದಾರೆ; ಯಾರು ಸಮಾಜದಲ್ಲಿ, ರಾಷ್ಟ್ರದ ಬೆಳವಣಿಗೆ ಆಗತಕ್ಕ ಕಾಲದಲ್ಲಿ ಹೆಚ್ಚು ಪ್ರಯತ್ನ ಪಟ್ಟಿದ್ದಾರೆ, ಅವರು ದುರ್ಬಲವರ್ಗದವರಿಗೆ ನೆರವನ್ನು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಇಂಥ ವಿಧೇಯಕವನ್ನು ತಂದು ಯಾರು ಸಮಾಜದಲ್ಲಿ ಅಫ್ಲುಯೆಂಟ್ ಸೆಕ್ಷನ್ಸ್ ಇದ್ದಾರೆ; ಅಂಥವರಿಂದ ತೆರಿಗೆಯನ್ನು ವಸೂಲು ಮಾಡತಕ್ಕ ಪ್ರಯತ್ನಮಾಡಿ; ಈ ಹಣವನ್ನು ರಾಷ್ಟ್ರದ ರಾಜ್ಯದ ಬೆಳವಣಿಗೆಗೆ ಮತ್ತು ದುರ್ಬಲವರ್ಗದ ಬೆಳವಣಿಗೆಗೆ ಉಪಯೋಗಿಸತಕ್ಕ ದೃಷ್ಟಿಕೋನವನ್ನು ಇಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದೇವೆಂದು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಕೂಡ ಉಳ್ಳವನ್ನು ಸ್ವಲ್ಪ ಹೆಚ್ಚು ರಾಜ್ಯಕ್ಕೆ ಕೊಡಬೇಕು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಹೊಂದಿಲ್ಲ. ಮತ್ತು ಯಾರು ಬೆಳವಣಿಗೆ ಆಗತಕ್ಕ ಕಾಲದಲ್ಲಿ ಹೆಚ್ಚು ಪ್ರಯತ್ನ ಆರ್ಥಿಕವಾಗಿ ಪಟ್ಟಿದ್ದಾರೆ, ಅಂಥವರು ರಾಜ್ಯಕ್ಕೆ ತೆರಿಗೆ ಮುಖಾಂತರ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ; ಈ ಸಿದ್ಧಾಂತವನ್ನು ನಾನು ವಿರೋಧಮಾಡುವುದಿಲ್ಲ; ಒಪ್ಪಿಕೊಳ್ಳುತ್ತೇನೆ. ಆದರೆ, ಮಾನ್ಯ ಹಣಕಾಸಿನ ಸಚಿವರು ಯಾರು ನಿಜವಾಗಿ ಹೆಚ್ಚಿನ ಸಂಪತ್ತನ್ನು ಗಳಿಸಿದ್ದಾರೆ, ಅರ್ಥಿಕವಾಗಿ ಮುಂದುವರೆಯುವುದಕ್ಕೆ ಪ್ರಯತ್ನಪಟ್ಟಿದ್ದಾರೆ; ಇಂಥ ಜನರ ಮೇಲೆ ಈ ಭಾರವನ್ನು ಹೇರುವ ಬದಲು ಸುಲಭವಾಗಿ ಕೈಗೆ ಸಿಗುವವರ ಮೇಲೆ ಈ ತೆರಿಗೆಯನ್ನು ಹೇರಿದ್ದಾರೆ. ಮತ್ತು ಅವರಿಗೆ ಸಮಾಜವಾದದ ಬಗ್ಗೆ ಕಲ್ಪನೆ ಇರುವುದಾದರೆ; ಈ ಒಂದು ಮಾತನ್ನು ಎಲ್ಲಾ ವರ್ಗದ ಜನರಿಗೂ ಅನ್ವಯಿಸಬೇಕಾಗುತ್ತದೆ. ಇವತ್ತು ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ಮಧ್ಯೆ ಅಂತರ ಇದೆ; ಇದನ್ನು ಕಡಿಮೆಮಾಡುವ ದೃಷ್ಟಿಯಿಂದ ಹೆಚ್ಚು ಆದಾಯವನ್ನು ಪಡೆಯತಕ್ಕಂಥ ಜನರ ಮೇಲೆ ತೆರಿಗೆ ಹಾಕುವ ಅಗತ್ಯ ಇದೆ. ಆದರೆ, ಅವರ ಪ್ರಯತ್ನ ಏನು ನಡೆದಿದೆ; ಅಂತರವನ್ನು ಕಡಿಮೆ ಮಾಡತಕ್ಕ ದೃಷ್ಟಿಯಿಂದ ಇದು ಪ್ರಯೋಜನ ನಡೆದಿಲ್ಲ ಕೇವಲ ಇದು ಸರ್ಕಸ್ ಆಗಿದೆಯೇ ವಿನಹ ಮೂಲಭೂತ ಬದಲಾವಣೆ ಮಾಡುವುದಕ್ಕೆ, ಅಂತರವನ್ನು ಮೂಲಭೂತವಾಗಿ ಕಡಿಮೆ ಮಾಡುವುದಕ್ಕೆ ಒಂದು ರೀತಿಯ ಎಕ್ಸರ್‌ಸೈಸ್ ಎಂದು ಈ ವಿಧೇಯಕವನ್ನು ಓದಿದ ಮೇಲೆ ತಿಳಿದು ಬರುತ್ತದೆ.

9-30 A.M.

ಇವತ್ತು ಕೆಲವು ವರ್ಗಗಳನ್ನು ವಿಂಗಡಣೆ ಮಾಡಿದ್ದಾರೆ. ಯಾರು ಖಚಿತವಾಗಿ ಸಂಬಳ ತೆಗೆದುಕೊಳ್ಳುತ್ತಾರೆ ಅಂಥವರ ಎಂದರೆ ಸರ್ಕಾರಿ ನೌಕರರು, ಕಾರ್ಖಾನೆಯಲ್ಲಿರತಕ್ಕವರು, ಮತ್ತು ಕಂಪೆನಿಯಲ್ಲಿರತಕ್ಕವರು ಇಂಥವರ ಯಾರ ಪ್ರಯತ್ನವೂ ಇಲ್ಲದೆ ಸುಲಭವಾಗಿ ನೇರವಾಗಿ ಲೆಕ್ಕ ಸಿಕ್ಕತಕ್ಕಂತಹ ಜನರು ಯಾರಿದ್ದಾರೆ ಅವರನ್ನು ಹುಡುಕಿ ಅವರ ಮೇಲೆ ತೆರಿಗೆಯನ್ನು ಹಾಕತಕ್ಕ ಪ್ರಯತ್ನ ಮಾಡಿದ್ದಾರೆ. ಯಾವಾಗಲೂ ಸುಲಭವಾಗಿ ಯಾರು ಸಿಕ್ಕುತ್ತಾರೆ ಅಂಥವರ ಮೇಲೆ ತೆರಿಗೆಯನ್ನು ಹಾಕುವುದು ಸುಲಭ. ಆದರೆ ಇಡೀ ರಾಷ್ಟ್ರದಲ್ಲಿ ಯಾರು ತೆರಿಗೆಯನ್ನು ಹಾಕಿದರೂ ಕೂಡ ಅದನ್ನು ತಪ್ಪಿಸಿಕೊಳ್ಳುತ್ತಾರೆ ಅಂಥವರ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಏನು ಪ್ರಯತ್ನವನ್ನು ಮಾಡಿದ್ದೀರಿ? ಇವತ್ತು ಅನೇಕ ಕಂಪೆನಿಗಳಲ್ಲಿ ಡೈರೆಕ್ಟರ್ ಇದ್ದಾರೆ ಅವರು ಯಾವುದಾದರೂ ಒಂದು ಸಭೆಯ ಮೀಟಿಂಗ್ ಅಟೆಂಡ್ ಮಾಡಿದೆ ಅವರು ಒಂದು ಸಾವಿರ, ಎರಡು ಟಿ.ಎ.ಡಿ.ಎ ತೆಗೆದುಕೊಳ್ಳುತ್ತಾರೆ. ಈಗ ಉದಾಹರಣೆಗೆ ಮಂಗಳೂರು ಕೆಮಿಕಲ್ ಫರ್ಟಿಲೈಸರ್ ಕಾರ್ಪೊರೇಷನ್ ಇದೆ. ಅದಕ್ಕೆ ಒಬ್ಬ ಡೈರೆಕ್ಟರು ಒಂದು ಮೀಟಿಂಗಿಗೆ ಹೋಗಿ ಬರುತ್ತಾರೆ ಆಗ

ಅವರು ಎಷ್ಟೋ ಟಿ.ಎ.ಡಿ.ಎ. ತೆಗೆದುಕೊಳ್ಳುತ್ತಾರೆ. ಸರ್ಕಾರದ ಪ್ರತಿನಿಧಿಯಾಗಲೀ, ಸಾರ್ವಜನಿಕ ಪ್ರತಿನಿಧಿ ಸರ್ಕಾರ ನಾಮಿನೇಷನ್ ಮಾಡಿರತಕ್ಕವರು ಅಂಥಾ ಮೀಟಿಂಗ್‌ಗಳಿಗೆ ಹೋಗಿ ಬಂದರೆ ಎಷ್ಟೋ ಹಣವನ್ನು ಸಂಪಾದನೆ ಮಾಡುತ್ತಾರೆ. ಇವೊತ್ತು ಅನೇಕ ಬಂಡವಾಳ ಷಾಹಿಗಳು ಅನೇಕ ಕೈಗಾರಿಕೋದ್ಯಮಿಗಳು ತೆರಿಗೆಯನ್ನು ಕೊಡುತ್ತಾರೆ. ಅವರು ಆದಾಯ ತೆರಿಗೆಯನ್ನು ಕೊಡುತ್ತಾರೆ. ಅವರು ಆದಾಯ ತೆರಿಗೆಯನ್ನು ಕೊಟ್ಟಾಗ್ಯೂ ಕೂಡ ಅವರು ಹೇಗೋ ಕಳ್ಳ ಹಣವನ್ನು ಸಂಪಾದನೆ ಮಾಡಿಕೊಳ್ಳುತ್ತಾರೆ. ಇದು ಎಲ್ಲರಿಗೂ ಗೊತ್ತಿದೆ. ಅಂಥವರ ಮೇಲೆ ಗಧಾಪ್ರಹಾರ ಮಾಡುವುದಕ್ಕೆ ಯಾವರೀತಿಯಲ್ಲೂ ಪ್ರಯತ್ನ ಮಾಡಿಲ್ಲ. ಯಾರು ಆದಾಯ ತೆರಿಗೆಯನ್ನು ಕೊಡುತ್ತಾರೆ ಅಂಥವರ ಮೇಲೆ ಈ ತೆರಿಗೆಯನ್ನು ಬೇಕಾದರೆ ಹಾಕಿ. ಯಾರು ಹೆಚ್ಚು ಸಂಪಾದನೆ ಮಾಡುತ್ತಾರೆ ಅವರ ಮೇಲೆ ಈ ತೆರಿಗೆಯನ್ನು ಹಾಕಬಹುದು. ಆದರೆ ನಿರಪರಾಧಿಗಳ ಮೇಲೆ ಅಷ್ಟೇ ಪ್ರಮಾಣದ ತೆರಿಗೆಯನ್ನು ಹಾಕಿದ್ದಾರೆ. ವರಮಾನ ರಂಗದಲ್ಲಿ ಒಂದು ಮಿತಿ ಏನಿದೆ ಅದನ್ನು ಧಾಟಿ ಹೋಗುವುದಕ್ಕೆ ಸಾಧ್ಯವಿಲ್ಲ. ಆ ಮಿತಿಯ ಒಳಗಡೆಯೇ ಇವರು ತೆರಿಗೆಯನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಕೇವಲ ಜೀವನಕ್ಕೋಸ್ಕರ ಉದ್ಯೋಗವನ್ನು ಅವಲಂಬಿಸಿ ಕೊಂಡಿರತಕ್ಕ ಜನಗಳಿಗೆ ಇಂಥಾ ತೆರಿಗೆಯಿಂದ ಬಾಧಕವಾಗುತ್ತದೆ. ಈಗಾಗಲೇ ನಮ್ಮ ಮಿತ್ರರು ವಕೀಲರ ಮೇಲೆ, ಡಾಕ್ಟರ ಮೇಲೆ ಮತ್ತು ಸಣ್ಣಪುಟ್ಟ ಕಸಬುಗಳನ್ನು ಅವಲಂಬಿಸಿಕೊಂಡಿರತಕ್ಕವರಿಗೆ ತೆರಿಗೆಯನ್ನು ಹಾಕುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ವಕೀಲರ ಮೇಲೆ ಈ ಒಂದು ತೆರಿಗೆಯನ್ನು ಹಾಕಿದ್ದಾರೆ. ಈಗ ಬೆಂಗಳೂರಿನಲ್ಲಿರತಕ್ಕ ವಕೀಲರಲ್ಲಿಯೇ ಸಣ್ಣ ಕೋರ್ಟಿನಲ್ಲಿ ಕೆಲಸ ಮಾಡತಕ್ಕ ವಕೀಲರಿಗೂ ದೊಡ್ಡ ಕೋರ್ಟಿನಲ್ಲಿ ಕೆಲಸ ಮಾಡತಕ್ಕ ವಕೀಲರಿಗೂ ನಾವು ವ್ಯತ್ಯಾಸವನ್ನು ಕಾಣಬೇಕು. ವೃತ್ತಿಯ ಆಧಾರದ ಮೇಲೆ ಈ ತೆರಿಗೆಯನ್ನು ಹಾಕಿದರೆ ಅನೇಕ ವಕೀಲರು ವರ್ಷದ ಕೊನೆಯಲ್ಲಿ ಇವರು ಹಾಕಿರತಕ್ಕಂಥಾ ತೆರಿಗೆಯನ್ನು ಕೊಡುವುದಕೆ ಸಾಧ್ಯವಿಲ್ಲದೆ ಇರತಕ್ಕ ಪರಿಸ್ಥಿತಿ ಇದೆ. ವಕೀಲರಲ್ಲಿ ದೊಡ್ಡ ವಕೀಲರು ಯಾರು ಆದಾಯ ತೆರಿಗೆಯನ್ನು ಕೊಡುತ್ತಾರೆಯೋ ಅಂಥವರ ಮೇಲೆ ಈ ತೆರಿಗೆಯನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದರೆ ಬಹುಶಃ ಸ್ವಲ್ಪ ಹಣ ಕೊಡಬಹುದು. ಈಗ ಎಷ್ಟು ಜನ ಪ್ರಾಕ್ಟೀಸಿಂಗ್ ಲಾಯರ್ಸ್ ಇದ್ದಾರೆ, ಅವರಲ್ಲಿ ಎಷ್ಟು ಜನ ಇನ್‌ಕಂ ಟ್ಯಾಕ್ಸ್ ಕೊಡುತ್ತಾರೆ ಇನ್‌ಕಂಟ್ಯಾಕ್ಸ್ ಕೊಡದೆ ಇರುವವರು ಎಷ್ಟು ಜನ ಎಂಬುದನ್ನು ಹೇಳುತ್ತೀರಾ ? ದೊಡ್ಡ ದೊಡ್ಡ ವಕೀಲರು ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳು ಒಂದೂವರೆ ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುವವರು ಇದ್ದಾರೆ. ಒಂದು ತಿಂಗಳಿಗೆ 200 ರೂಪಾಯಿಗಳನ್ನು ಸಂಪಾದನೆ ಮಾಡದೆ ಇರುವ ವಕೀಲರು ಇದ್ದಾರೆ. ಹೀಗಿರುವಾಗ ಸಾಮೂಹಿಕವಾಗಿ ಈ ಒಂದು ತೆರಿಗೆಯನ್ನು ಎಲ್ಲಾ ವಕೀಲರಿಗೂ ಹಾಕಿದರೆ ಹೇಗೆ ? ನಾನು ಶಾಸನಸಭಾ ಸದಸ್ಯನಾದ ಮೇಲೆ ವಕಾಲತ್ತು ಮಾಡುವುದಕ್ಕೆ ಹೋಗಿಲ್ಲ. ಆದರೆ ನನಗೆ ಸನ್ನದ್ದು ಮಾತ್ರ ಇದೆ. ಸನ್ನದ್ದು ಇದೆಯೆಂದು ತೆರಿಗೆಯನ್ನು ಹಾಕಿದರೆ ಹೇಗೆ ವಕೀಲ್ ವೃತ್ತಿಯನ್ನು ಮಾಡಿ ಸಾಕಷ್ಟು ಸಂಪಾದನೆ ಮಾಡಿದ್ದರೆ ಆಗ ಈ ತೆರಿಗೆಯನ್ನು ಹಾಕುವುದು ಸರಿ ಎಂದು ಹೇಳಬಹುದಾಗಿತ್ತು. ಈ ದೃಷ್ಟಿಯಿಂದ ವಕೀಲರಿಗೆ ಬರೀ ಪ್ರಾಕ್ಟೀಸಿಂಗ್ ಆಧಾರದಮೇಲೆ ಈ ತೆರಿಗೆಯನ್ನು ಹಾಕುವುದು ಸರಿಯಲ್ಲ. ಮುಫ್ಯೂಸಿಯಲ್ ಏರಿಯಾದರಲ್ಲಿ ಬಹಳ ಹಂತದಲ್ಲಿ ಕೋರ್ಟಿಗೆ ರಿಟ್ ಹಾಕತಕ್ಕವರು, ಕೇಸ್ ಹಾಕತಕ್ಕವರು ಬಹಳ ಕಡಿಮೆ. ಅದರಕಾರಣ ವಕೀಲ್‌ವೃತ್ತಿಯ ಆಧಾರದ ಮೇಲೆ ಈ ವೃತ್ತಿ ತೆರಿಗೆಯನ್ನು ಹಾಕುವುದು ತೀರಾ ಅನ್ಯಾಯವಾಗುತ್ತದೆ. ಬೆಂಗಳೂರು ಬಾರ್ ಅಸೋಸಿಯೇಷನ್‌ನಲ್ಲಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಕಾಫಿ ಕುಡಿಯುವುದಕ್ಕೆ ಒಂದು ರೂಪಾಯಿ ಇಲ್ಲದೆ ಇರುವ ವಕೀಲರು ಇದ್ದಾರೆ. 10-15 ವರ್ಷ ಪ್ರಾಕ್ಟೀಸ್ ಆದವರು ಅಂಥವರು ಇದ್ದಾರೆ. ಆದ್ದರಿಂದ ವಕೀಲರಿಗೆ ಈ ಒಂದು ತೆರಿಗೆಯನ್ನು ಹಾಕುವುದಕ್ಕೆ ಹೋಗುವುದು ಸರಿಯಲ್ಲ. ಇದನ್ನು ಕೈಬಿಡಬೇಕು ಎಂದು ನಾನು ಹೇಳುತ್ತೇನೆ.

ಚೆನ್ನಾಗಿ ಒಳ್ಳೆಯ ಸಂಪಾದನೆ ಇರತಕ್ಕ ಡಾಕ್ಟರು ಇದ್ದಾರೆ. ಒಂದು ತಿಂಗಳಿಗೆ 200-300 ರೂಪಾಯಿಗಳ ಸಂಪಾದನೆ ಇಲ್ಲದೆ ಇರುವವರೂ ಇದ್ದಾರೆ. ಆದ್ದರಿಂದ ಅವರಲ್ಲಿ ಆದಾಯ ತೆರಿಗೆಯ ವ್ಯಾಪ್ತಿಯಲ್ಲಿ ಇದ್ದರೆ ಅಂಥವರಿಗೆ ಬೇಕಾದರೆ ಈ ತೆರಿಗೆಯನ್ನು ಸ್ವಲ್ಪಮಟ್ಟಿಗೆ ಹಾಕಿದರೂ ಹೌದು ಎಂದು ಹೇಳಬಹುದು. ಆದರೆ ಸಾಮೂಹಿಕವಾಗಿ ಎಲ್ಲರಿಗೂ ಈ ತೆರಿಗೆಯನ್ನು ಹಾಕುವುದು

ಒಳ್ಳೆಯದಲ್ಲ. ಇದನ್ನು ಕೈಬಿಡಬೇಕು ಎಂದು ನಾನು ಹೇಳುತ್ತೇನೆ. ಈ ತೆರಿಗೆಯನ್ನು ಹಾಕತಕ್ಕ ಪ್ರಮಾಣದಲ್ಲಿ ಕೂಡ 50 ರೂಪಾಯಿಗಳಿಂದ 250 ರೂಪಾಯಿಗಳವರೆಗ ತೆರಿಗೆಯನ್ನು ಹಾಕತಕ್ಕಂಥಾ ಪ್ರಯತ್ನವನ್ನು ಮಾಡಿದ್ದಾರೆ. ಕೇವಲ ವರಮಾನವನ್ನು ಆಧಾರವಾಗಿಟ್ಟುಕೊಂಡು ಈ ಒಂದು ತೆರಿಗೆಯನ್ನು ಹಾಕತಕ್ಕಂಥಾ ಪ್ರಯತ್ನ ಮಾಡಿಲ್ಲ. ಯಾರು ಯಾರಿಗೆ ಈ ಒಂದು ತೆರಿಗೆಯನ್ನು ಹಾಕಬಹುದು ಎನ್ನತಕ್ಕಂಥಾ ಒಂದು ಪಟ್ಟಿಯನ್ನು ಮಾಡದೆ ಸುಮ್ಮನೆ 50 ರೂಪಾಯಿಗಳಿಂದ 250 ರೂಪಾಯಿಗಳವರೆಗೆ ತೆರಿಗೆಯನ್ನು ಹಾಕತಕ್ಕಂಥಾ ಪ್ರಯತ್ನವನ್ನು ಮಾಡಿದ್ದಾರೆ. ವೃತ್ತಿಯನ್ನು ಮಾತ್ರ ಲೆಕ್ಕಕ್ಕೆ ತೆಗೆದು ಕೊಂಡಿದ್ದಾರೆ, ಆದರೆ ಅವರಿಗೆ ಎಷ್ಟು ವರಮಾನ ಇದೆ ಎಂಬುದನ್ನು ಗಣನೆಗೆ ತೆಗೆದುಕೊಂಡಿಲ್ಲ. ಬೇರೆ ಉದ್ಯೋಗಗಳನ್ನು ಮಾಡಿ, ಬೇರೆ ವ್ಯವಹಾರಗಳನ್ನು ಮಾಡಿ ಇಷ್ಟೇ ಪ್ರಮಾಣದ ಹಣವನ್ನು ಸಂಪಾದನೆ ಮಾಡತಕ್ಕ ಜನರು ಈ ರಾಜ್ಯದಲ್ಲಿ ಇಲ್ಲವೇ ? ಅವರಿಗೆ ತೆರಿಗೆಯನ್ನು ಹಾಕತಕ್ಕ ಪ್ರಯತ್ನ ಏನು ಮಾಡಿದ್ದೀರಿ? ಇಡೀ ರಾಜ್ಯದಲ್ಲಿ ಯಾರು ಯಾರು ಎಷ್ಟೆಷ್ಟು ಯಾವ ಯಾವ ರೂಪದಲ್ಲಿ ಯಾವ ಯಾವ ಉದ್ಯೋಗದಲ್ಲಿ ಸಂಪಾದನೆ ಮಾಡುತ್ತಾರೆ ಎನ್ನುವ ಸಂಪೂರ್ಣ ಮಾಹಿತಿ ಇರಬೇಕು. ಕೇವಲ ಕೆಲವು ವ್ಯಕ್ತಿಗಳ ಆದಾಯವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ನಡೆದಿದೆ. ಸರ್ಕಾರದ ಒಂದು ನಿಸ್ಸಹಾಯಕತೆಯಿಂದ ಎಲ್ಲಾ ಸಂದರ್ಭಗಳಲ್ಲೂ ಅನೇಕರು ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಾರೆ. ನೇರವಾಗಿ ಯಾರು ಕಣ್ಣಿಗೆ ಬೀಳುತ್ತಾರೆ, ಕೈಗೆ ಸಿಕ್ಕುತ್ತಾರೆ ಅವರಿಗೆ ಮಾತ್ರ ತೆರಿಗೆಯನ್ನು ಹಾಕತಕ್ಕಂಥಾ ಪ್ರಯತ್ನ ನಡೆದಿದೆ. ಆ ರೀತಿ ತೆರಿಗೆಯನ್ನು ಕೈಬಿಡುವುದು ಸರಿಯಲ್ಲ. ಯಾವ ಯಾವ ವರ್ಗದ ಜನ ಯಾವ ಯಾವ ಉದ್ಯೋಗದಿಂದ ಎಷ್ಟೆಷ್ಟು ಸಂಪಾದನೆ ಮಾಡುತ್ತಾರೆ ಎನ್ನುವ ಪಟ್ಟಿಯನ್ನು ತಯಾರು ಮಾಡಿದರೆ ತೆರಿಗೆಯನ್ನು ಹಾಕತಕ್ಕಂಥಾ ವಿಚಾರದಲ್ಲಿ ಸಂಪೂರ್ಣ ಮಾಹಿತಿ ಸಿಕ್ಕುತ್ತದೆ. ಯಾರು ಯಾರಿಗೆ ಈ ತೆರಿಗೆಯನ್ನು ಹಾಕಬಾರದು ಎಂಬುದು ಗೊತ್ತಾಗುತ್ತದೆ. ಆದರೆ ಇವತ್ತು ನೀವು ಯಾವ ಸಂದರ್ಭದಲ್ಲಿ ಕೈಹಾಕಿದರೂ ಕೂಡ ಲೆಕ್ಕಕ್ಕೆ ಸಿಕ್ಕುತ್ತಾ ಇಲ್ಲ. ನಿಮ್ಮ ಕಣ್ಣಿಗೆ ಕಾಣದೇ ಇರತಕ್ಕವರ ಬಗ್ಗೆ ನೀವು ಯಾವ ಪ್ರಯತ್ನವನ್ನೂ ಮಾಡಿಲ್ಲ. ಇವತ್ತಿನ ದಿವಸ ನೀವು ಏನು ಒಂದು ಲಿಸ್ಟ್ ಇಟ್ಟುಕೊಂಡು 50 ರಿಂದ 250 ರೂಪಾಯಿವರೆಗೆ ಟ್ಯಾಕ್ಸನ್ನು ಹಾಕುವುದಕ್ಕೆ ಪ್ರಯತ್ನಪಟ್ಟಿದ್ದೀರಿ, ಅವರು ಒಂದಲ್ಲ ಒಂದು ಕಾರಣದಿಂದ ತೆರಿಗೆಯನ್ನು ಕೊಡುತ್ತಾ ಇದ್ದಾರೆ. ಯಾವ ಸಂದರ್ಭದಲ್ಲೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿಯವರೆಗೆ ಪ್ರೊಫೆಷನಲ್ ಟ್ಯಾಕ್ಸ್ ಇತ್ತು, ಸ್ಥಳೀಯ ಸಂಸ್ಥೆಗಳು ಇದನ್ನು ಹಾಕಬಹುದಾಗಿತ್ತು, ಅದನ್ನು ವಸೂಲು ಮಾಡುವುದಕ್ಕೆ ಆಗುವುದಿಲ್ಲ, ಇದನ್ನು ಕೈಬಿಡುವುದು ಒಳ್ಳೆಯದು ಎಂದು ಭಾರ್ಗವ ಸಮಿತಿಯವರು ಶಿಫಾರಸ್ಸು ಮಾಡಿದ್ದಾರೆ, ಆದುದರಿಂದ ಅದನ್ನು ತೆಗೆದುಹಾಕಿದ್ದೇವೆ ಎಂದು ಹೇಳಿದಿರಿ. ಸ್ಥಳೀಯ ಸಂಸ್ಥೆಗಳಿಗೆ ಅನ್ಯಾಯ ತೆಗೆದುಹಾಕಬೇಕು ಎನ್ನುವ ಅಭಿಪ್ರಾಯ ಸರ್ಕಾರದ ಮುಂದೆ ಇದೆ. ಅದಕ್ಕೆ ಬದಲ ಹಣಕಾಸಿನ ವ್ಯವಸ್ಥೆಯನ್ನು ಮಾಡದೆ, ಅದನ್ನು ತೆಗೆಯಬಾರದು ಎಂದು ತಾವೇ ಈ ಸದನದಲ್ಲಿ ಹೇಳಿದ್ದೀರಿ. ಸ್ಥಳೀಯ ಸಂಸ್ಥೆಗಳು ಸಕ್ರಿಯವಾಗಿ; ವ್ಯವಸ್ಥಿತವಾಗಿ ಹಣಕಾಸಿನ ಮೂಲವನ್ನು ಹುಡುಕಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದರೆ, ಪ್ರೊಫೆಷನಲ್ ಟ್ಯಾಕ್ಸ್ ಸಂಗ್ರಹಣೆ ಮಾಡತಕ್ಕ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಾಕಷ್ಟು ಅಧಿಕಾರವನ್ನು ತಾವು ನೀಡಲಿಲ್ಲ. ಅವರಿಗೆ ಲೋಕಲ್ ಬೋರ್ಡ್ಸ್ ಆಕ್ಟ್‌ನಲ್ಲಿ ಈ ತೆರಿಗೆಯನ್ನು ವಸೂಲು ಮಾಡುವುದು ಮತ್ತು ವಸೂಲು ಮಾಡುವುದಕ್ಕೆ ಬೇಕಾದ ಅಧಿಕಾರ ಪಡೆಯತಕ್ಕದ್ದು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಇರುವುದರಿಂದ ಅವರು ಸಮರ್ಪಕವಾಗಿ ವಸೂಲು ಮಾಡಿಲ್ಲ. ಮಾನ್ಯ ಸ್ನೇಹಿತರಾದ ಶಾಮಣ್ಣನವರು ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಕಾರ್ಪೊರೇಟರಾಗಿ ತಮ್ಮ ಬಹಳ ವರ್ಷಗಳ ಅನುಭವ ಪಡೆದು ಹೇಳಿದ್ದಾರೆ ಎಷ್ಟು ಜನ ಉದ್ಯೋಗದಲ್ಲಿ ತೊಡಗಿದ್ದಾರೆ, ಅವರು ಕೊಡತಕ್ಕ ತೆರಿಗೆಯನ್ನು ರಿಕವರಿ ಮಾಡುವುದಕ್ಕೆ, ಸರ್ಚ್ ಮಾಡುವುದಕ್ಕೆ ಅಟ್ಯಾಚ್‌ಮೆಂಟ್ ಮಾಡುವುದಕ್ಕೆ ಪವರ್ ಇಲ್ಲ. ಆದುದರಿಂದ ಇದನ್ನು ತಳ್ಳಿಹಾಕಿದ್ದಾರೆ. ಶ್ರೀಮಂತನನ್ನು ಅಟ್ಯಾಚ್‌ಮೆಂಟ್ ಮಾಡುವುದಕ್ಕೆ ಹೋದರೆ ಅವನು ಮಂತ್ರಿಗಳ ಸಹಾಯ ಪಡೆದುಬಂದು ಇನ್‌ಫ್ಲುಯನ್ಸ್ ಮಾಡಿ ಅಧಿಕಾರಿಗಳನ್ನು ವರ್ಗ ಮಾಡಿಸುತ್ತಾರೆ. ಪ್ರಬಲವಾದ ಜನರಿಂದ ಸ್ಥಳೀಯ ಸಂಸ್ಥೆಗಳಲ್ಲಿ ಪ್ರೊಫೆಷನಲ್ ಟ್ಯಾಕ್ಸನ್ನು ವಸೂಲು ಮಾಡತಕ್ಕ ಕೆಲಸದಲ್ಲಿ ಸರ್ಕಾರ ಸಹಾಯ ಮಾಡಲಿಲ್ಲ. ಆ ಕಾರಣದಿಂದ ಸ್ಥಳೀಯ ಸಂಸ್ಥೆಗಳು ಇದರ ಪ್ರಯೋಜನ ಪಡೆಯುವುದಕ್ಕೆ ಆಗಲಿಲ್ಲ. ಆದುದರಿಂದ ಈಗ ಸರ್ಕಾರವೇ ಕೈಗೆ ತೆಗೆದುಕೊಂಡು ನೇರವಾಗಿ

ತಾವೇ ಮಾಡಬೇಕು ಎಂದು ಮಾಡಿದ್ದೀರಿ. ತಮಗೆ ಅಧಿಕಾರ ಇರುವುದರಿಂದ ಯಾವ ತೆರಿಗೆಯನ್ನು ಹಾಕಿದರೂ ವಸೂಲು ಮಾಡಬಹುದು. ಅಧಿಕಾರ ಬಲದಿಂದ ಏನಾದರೂ ಮಾಡಬಹುದು. ಅದರೆ ಅಧಿಕಾರ ಚಲಾವಣೆ ಮಾಡತಕ್ಕ ಕಾಲದಲ್ಲಿ ಸ್ವಲ್ಪ ನ್ಯಾಯ ಮತ್ತು ನೀತಿಗೆ ಬದ್ಧರಾಗಿರಬೇಕಾಗುತ್ತದೆ. ಈಗ ಏನು ಅಧಿಕಾರವನ್ನು ಚಲಾಯಿಸುವುದಕ್ಕೆ ಹೊರಟ್ಟಿದ್ದೀರಿ, ಅದೇ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದ ಪಕ್ಷದಲ್ಲಿ, ಸ್ಥಳೀಯ ಸಂಸ್ಥೆಗಳು ಸಂಪನ್ಮೂಲಗಳನ್ನು ಮಾಡಿಕೊಳ್ಳುತ್ತಿದ್ದುವು. ಅಫ್ಲೂಯಂಟ್ ಸೆಕ್ಷನ್‌ನಿಂದ ಸ್ವಲ್ಪ ತೆರಿಗೆಯನ್ನು ವಸೂಲುಮಾಡಿ ದುರ್ಬಲ ವರ್ಗದವರಿಗೆ ಸಹಾಯ ಮಾಡಬೇಕು ಎಂದು ತಾವು ಮಾಡಿದ್ದೀರಿ. ಈ ತೆರಿಗೆಯನ್ನು ಏನು ವಸೂಲು ಮಾಡುತ್ತೀರಿ, ಈ ಹಣವನ್ನು ದುರ್ಬಲರಿಗೆ ಯಾವರೀತಿ ವೆಚ್ಚಮಾಡುತ್ತೀರಿ ಎನ್ನುವುದಕ್ಕೆ ಏನಾದರೂ ಸ್ಕೀಂ ಇದೆಯೇ ಸ್ವಾಮಿ?

ಶ್ರೀ ಎಂ. ವೈ. ಘೋರ್ಪಡೆ.—ಪೀಪಲ್ ಹೌಸಿಂಗ್ ಪ್ರೋಗ್ರಾಂಗೋಸ್ಕರ ಇದನ್ನು ಖರ್ಚು ಮಾಡುತ್ತೇವೆ. ಮೊದಲು 4 ಕೋಟಿ ಇತ್ತು, ಇದರಿಂದ ಬರುವ 4.5 ಕೋಟಿಯನ್ನು ಸೇರಿಸುತ್ತೇವೆ ಒಟ್ಟು 8.5 ಕೋಟಿ ಆಯಿತು.

ಶ್ರೀ ಕಾಗೋಡು ತಿಮ್ಮಪ್ಪ.— ದುರ್ಬಲವರ್ಗಕ್ಕೋಸ್ಕರ ಖರ್ಚು ಮಾಡುವುದನ್ನು ಮಾಡಲೇ ಬೇಕು. ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಹೊಸ ತೆರಿಗೆಯನ್ನು ಹಾಕಿ, ಆ ಹಣವನ್ನು ದುರ್ಬಲ ವರ್ಗದ ರಕ್ಷಣೆಗೋಸ್ಕರ,ಅವರ ಯೋಗಕ್ಷೇಮಕ್ಕೋಸ್ಕರ ವಿನಿಯೋಗ ಮಾಡಬೇಕು ಎಂದು ಹೇಳುತ್ತಿದ್ದೀರಲ್ಲ ಅದು ನಂಬತಕ್ಕ ಮಾತಲ್ಲ. ಈಗ ಮಾನ್ಯ ಪ್ರಭಾಕರ್‌ರವರ ಅಧ್ಯಕ್ಷತೆಯಲ್ಲಿ ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್ ಅಭಿವೃದ್ಧಿ ಕಾರ್ಪೊರೇಷನ್ ಏನು ಮಾಡಿದ್ದೀರಿ ಅದಕ್ಕೆ ಈ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಕೊಡುವುದಾದರೆ ನನ್ನ ಅಭ್ಯಂತರವಿಲ್ಲ,ಮಾಡಿರಿ. ಈ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ದುರ್ಬಲವರ್ಗದವರಿಗೆ ಕೊಡಬೇಕು ಎಂದರೆ ಹರಿಜನ-ಗಿರಿಜನರ ಅಭಿವೃದ್ಧಿ ಕಾರ್ಪೋರೇಷನ್‌ಗೆ ಪ್ರತಿವರ್ಷ ಕೊಟ್ಟುಬಿಡಿ. ಆಗ ನಿಜವಾಗಿಯೂ ದುರ್ಬಲವರ್ಗದವರಿಗೆ ನೇರವಾಗಿ ಹಣ ಖರ್ಚಾಗುತ್ತದೆ. ನಾವು ಸಂಪಾದನೆ ಮಾಡತಕ್ಕ ಜನ ಸ್ವಲ್ಪಮಟ್ಟಿಗಾದರೂ ತ್ಯಾಗ ಮಾಡೋಣ ಎಂದು ನಾನು ಹೇಳುತ್ತೇನೆ. ಇವತ್ತು ಈ ಹಣ ಬಂದು ವೆಚ್ಚಕ್ಕೆ ಖರ್ಚಾಗುತ್ತದೆ, ಯಾವ ದುರ್ಬಲವರ್ಗಕ್ಕೂ ಈ ಹಣ ಖರ್ಚು ಮಾಡುವುದಿಲ್ಲ ಜೊತೆಗೆ ಇನ್ನೊಂದು ದುರಂತವನ್ನು ನಾವು ಮಾಡತಾ ಇದ್ದೇವೆ. ಸರ್ವೇಸಾಧಾರಣವಾಗಿ ತೆರಿಗೆಯನ್ನು ಹಾಕತಕ್ಕ ಕಾಲದಲ್ಲಿ ಈ ಶಾಸನ ಸಭೆಗೆ ಪರಮಾಧಿಕಾರ ಇತ್ತು. ತೆರಿಗೆಯನ್ನು ಹಾಕುವಂಥಾದ್ದು ಮತ್ತು ತೆರಿಗೆಯನ್ನು ವಸೂಲು ಮಾಡತಕ್ಕ ಸಂದರ್ಭದಲ್ಲಿ ಅದಕ್ಕೆ ಏನೇನು ಕ್ರಮಗಳನ್ನು ಮನಿ ಬಿಲ್ ಆಧಾರದ ಮೇಲೆ ಮಸೂದೆ ತಂದು, ಶಾಸನಮಾಡಿ, ರಾಜ್ಯಪಾಲರಿಂದ ಸ್ವೀಕೃತವಾಗಿ, ಆದರ ಬಗ್ಗೆ ನಾವು ಈ ಸದನದಲ್ಲಿ ಚರ್ಚೆಮಾಡಿ, ಹೊಸ ತೆರಿಗೆಯನ್ನು ಹಾಕತಕ್ಕ ಅಧಿಕಾರವನ್ನು ಸರ್ಕಾರಕ್ಕೆ ಕೊಡಬೇಕು. ಆದರೆ ಇಲ್ಲಿಯವರಿಗೆ ಹಾಕುವ ತೆರಿಗೆಯನ್ನು ಹಾಕಿ ಮತ್ತೆ ಇನ್ಯಾವುದಾದರು ತೆರಿಗೆಯನ್ನು ಹಾಕತಕ್ಕ ಸಂದರ್ಭದಲ್ಲಿ ನೋಟಿಫಿಕೇಷನ್ ಮುಖಾಂತರ ಮಾಡಬಹುದು ಎನ್ನುವ ಅಧಿಕಾರವನ್ನು ಇದೇ ಮಸೂದೆಯಲ್ಲಿ ಪಡೆದಿದ್ದೀರಿ. ಅಂದರೆ ಹೊಸ ತೆರಿಗೆಯನ್ನು ಮತ್ತೆ ಹಾಕುವುದಕ್ಕೆ ತಮಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಯಾವುದೇ ವರ್ಗದ ಜನರಿಗೆ ತೆರಿಗೆ ಕಡಿಮೆ ಮಾಡುವುದಾಗಲೀ, ಜಾಸ್ತಿಮಾಡುವುದಾಗಲಿ ಅಥವಾ ಬಿಟ್ಟುಹೋಗಿರತಕ್ಕ ವರ್ಗದ ಮೇಲೆ ಪ್ರೊಫೆಷನಲ್ ಟ್ಯಾಕ್ಸ್ ಹಾಕುವುದಕ್ಕಾಗಲೀ, ಟ್ರೇಡರ್ಸ್, ಉದ್ಯೋಗದಲ್ಲಿ ತೊಡಗಿರತಕ್ಕವರು ಕಂಡು ಬಂದರೆ-ಅಂತಹವರಿಗೆ ತೆರಿಗೆಯನ್ನು ಹಾಕತಕ್ಕ ಅಧಿಕಾರವನ್ನು ಪರಿಪತ್ರದ ಮುಖೇನ ಪಡೆಯತಕ್ಕದ್ದನ್ನು ಈ ವಿಧೇಯಕದಲ್ಲಿ ಅಳವಡ ಮಾಡಿಕೊಂಡಿದ್ದೀರಿ. ಇದು ಸಾಧುವಾದ ಕೆಲಸವಲ್ಲ. ಯಾವುದೇ ಒಂದು ಹೊಸ ತೆರಿಗೆಯನ್ನು ಹಾಕುವುದಕ್ಕೆ ಹೋದಾಗ, ಅದು ಶಾಸನ ಸಭೆಯಲ್ಲಿ ಬಂದು, ಚರ್ಚೆಯಾಗಿ, ಒಂದು ಶಾಸನದ ಮುಖೇನ ಅಧಿಕಾರ ಪಡೆದು ತೆರಿಗೆಯನ್ನು ಹಾಕಬೇಕೇ ವಿನಹ ಈ ತರಹ ಡಿಲಿಗೇಟ್ ಪವರ್ ತೆಗೆದುಕೊಳ್ಳುವುದು ತಪ್ಪು, ಅದು ನ್ಯಾಯ ಸಮ್ಮತವಾಗುವುದಿಲ್ಲ, ರಾಜ್ಯಾಂಗಬದ್ಧವಾಗಿ ಕೂಡ ಅದನ್ನು ಒಪ್ಪತಕ್ಕ ಮಾತಲ್ಲ. ಮನಿ ಬಿಲ್ ತಂದು ಏನೇನು ಕ್ರಮಗಳನ್ನು ಅನುಸರಿಸಬೇಕು ಎನ್ನುವುದು ಆರ್ಟಿಕಲ್ 199ರಲ್ಲಿ ಇದ್ದೇ ಇದೆ. ಯಾರೋ ಒಬ್ಬರಿಗೆ ತೆರಿಗೆಯನ್ನು ಹಾಕಬೇಕು ಎಂದು ತೀರ್ಮಾನ ಮಾಡಿದರೆ ಆದು ಹೊಸ ತೆರಿಗೆಯಾಗುವುದಿಲ್ಲವೇ. ಹೊಸ ತೆರಿಗೆ ಹಾಕತಕ್ಕ ಸಂದರ್ಭದಲ್ಲಿ ಶಾಸನ ಸಭೆ ಅಭಿಪ್ರಾಯ

ಕೊಡುವುದಕ್ಕೆ ಏನು ಅವಕಾಶ ಇದೆ ಆದಕ್ಕೆ ಇದರಿಂದ ಅವಕಾಶವಾಗುವುದಿಲ್ಲ. ಬೇಕಾದವರಿಗೆ ಬಿಡಬಹುದು ಬೇಡದೇ ಇದ್ದವರಿಗೆ ಹಾಕಬಹುದು. ಈ ಡೆಲಿಗೇಟೆಡ್ ಪವರ್ ಏನಿದೆ ಇದನ್ನು ದಯವಿಟ್ಟು ಕೈಬಿಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ನೋಟಿಫಿಕೇಷನ್ ಮಾಡುತ್ತೇವೆ, ಅದರಲ್ಲಿ ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.--ಆಗ ಹೇಳುವುದಕ್ಕಾಗುವುದಿಲ್ಲ. ಸೀರಿಯಲ್ ನಂ. 21ರಲ್ಲಿ ಈ ರೀತಿ ಹೇಳುತ್ತಾರೆ.-

> "Persons other than those mentioned in any of the preceding entries who are engaged in professions, trade callings or employments and in respect of whom a notification is issued under the second proviso to section 3(2)

ಇಲ್ಲಿ ಏನಾಗಿದೆಯೆಂದರೆ ಈ ಒಂದು ಲಿಸ್ಟ್‌ನಲ್ಲಿ ಬಂಧಿರತಕ್ಕ ವರ್ಗದ ಜನರಿಗೆ ಇಪತ್ತು ಮಾಸೂದೆಯಲ್ಲಿ ತೆರಿಗೆಯನ್ನು ಹಾಕಬಹುದು. ಈ ಒಂದು ತಮ್ಮ ಲಿಸ್ಟ್‌ನಲ್ಲಿ ಬರದೇ ಇರತಕ್ಕ ಜನರಿಗೆ ಒಂದು ನೋಟಿಫಿಕೇಷನ್ ಮುಖಾಂತರ ತೆರಿಗೆಯನ್ನು ಹಾಕುವುದಕ್ಕೆ ಅಧಿಕಾರ ಇದೆ. ಅಂದಾಗ ಹೊಸ ತೆರಿಗೆಯನ್ನು ತಾವು ಹಾಕಿದ ಹಾಗೆ ಆಗುತ್ತದೆ. ಹೊಸ ತೆರಿಗೆಯನ್ನು ಹಾಕತಕ್ಕ ಕಾಲದಲ್ಲಿ ಆದಾಯ ಸರ್ಕಾರಕ್ಕೆ ಬರುತ್ತದೆ. ಆದರೆ ತಾವು ಸಂವಿಧಾನದ ಆರ್ಟಿಕಲ್ 199ನ್ನು ವಯಲೇಟ್ ಮಾಡಿದಂತಾಗುತ್ತದೆ.ಇಲ್ಲದೆ ಹೋದರೆ ತಮಗೆ ಬೇರೆ ಮಾರ್ಗವೇ ಇಲ್ಲ.ತಾವು ಸುಲಭವಾಗಿ ಈ ರೀತಿಯಾಗಿ ರಾಜ್ಯಾಂಗದ ವಿರುದ್ಧ ಹೋಗುವುದಕ್ಕೆ ಪ್ರಯತ್ನ ಮಾಡುವುದು ಸರಿಯಲ್ಲ. ಈ ಒಂದು ಪ್ರಾವಿಷೋ ರಾಜ್ಯಾಂಗದ ವಿರುದ್ಧ ಆಗುವುದಾದರೆ, ಯಾರಾದರೂ ಕೋರ್ಟಿಗೆ ಹೋದರೆ Entire Act will be struck down by the High Court because this Bill has to withstand to the Court's interpretation. ಆದ್ದರಿಂದ ದಯವಿಟ್ಟು ಮೂಲಭೂತವಾಗಿ ಹೆಚ್ಚು ಕಡಿಮೆ ಶಾಸಕಾಂಗದ ಪವರ್ಸ್ ಅನ್ನು ಕೊಡಿ ಎಂದರೆ ಅದು ಸರಿಯಾಗುವುದಿಲ್ಲ. ಶಾಸಕಾಂಗದಲ್ಲಿ ಏನಾದರೂ ಮಾಡಿದರೆ ಅದನ್ನು ಕಾರ್ಯಗತ ಮಾಡತಕ್ಕ ಸಂದರ್ಭದಲ್ಲಿ ಕಾರ್ಯಾಂಗಕ್ಕೆ ಪವರ್ಸ್ ಡೆಲಿಗೇಟ್ ಮಾಡುತ್ತೇವೆಯೇ ವಿನಹ ಹೊಸದಾಗಿ ಕಾರ್ಯಾಂಗಕ್ಕೆ ಅಧಿಕಾರವನ್ನು ಕೊಡತಕ್ಕದ್ದು ಇಲ್ಲ. It exercises almost a new power which the Government has no power to do so ಆದ್ದರಿಂದ ಇದನ್ನು ದಯವಿಟ್ಟು ಕೈಬಿಡಬೇಕು. ಎನ್ನುವ ಮಾತನ್ನು ಹೇಳುತ್ತೇನೆ, ಇವತ್ತು ತಮ್ಮ ಪ್ರಯತ್ನದಿಂದ ವ್ಯವಸಾಯಗಾರರ ಮೇಲೆ ಹೊಸ ತೆರಿಗೆಯನ್ನು ಹಾಕಲಾಗಿದೆ.ಬಹಳ ಜನಕ್ಕೆ ವ್ಯವಸಾಯದ ಕ್ಷೇತ್ರದ ಮೇಲೂ ತೆರಿಗೆಯನ್ನು ಹಾಕಿಲ್ಲ. ಎನ್ನುವ ಭಾವನೆ ಇತ್ತು. ಈಗ ಈ ಕ್ಷೇತ್ರದ ವರಮಾನ ಆಧಾರದ ಮೇಲೆ ವ್ಯವಸಾಯದ ಮೇಲೂ ತೆರಿಗೆಯನ್ನು ಹಾಕಿದ್ದಾರೆ. ಈಗ ಪ್ರೊಫೆಷನ್ ಎಂದರೆ, ವ್ಯವಸಾಯಗಾರರೂ ಕೂಡ ಈ ಒಂದು ಶಾಸನದ ವ್ಯಾಪ್ತಿಯಲ್ಲಿ ಬರುತ್ತಾರೆ. ಯಾರು ಯಾವ ಒಂದು ಉದ್ಯೋಗವನ್ನು ಅವಲಂಬಿಸಿಕೊಂಡಿರುತ್ತಾರೋ ಅವರೆಲ್ಲರೂ ಈ ಒಂದು ಬಿಲ್ಲಿನ ಪ್ರಕಾರ ವ್ಯಾಪ್ತಿಯಲ್ಲಿ ಬರುತ್ತಾರೆ. ಅವರ ಮೇಲೆ ತೆರಿಗೆಯನ್ನು ಹಾಕಲಿಕ್ಕೆ ಅವಕಾಶ ಇದೆ.

'2 (h) 'Person' means any person who is engaged in any profession trade, calling or employment in the State of Karnataka and includes a Hindu undivided family, firm, company, corporation or other corporate body, any society, club or association, so engaged but does not include any person who earns wages on a casual basis'.

ಇದರಲ್ಲಿ ಟ್ರೇಡ್ ಬಿಟ್ಟು ಬಿಡಿ, ಅಗ್ರಿಕಲ್‌ಚರ್ ಸಹ ಇಕ್ವಿವಲೆಂಟ್ ಪ್ರೊಫೆಷನ್. ತಾವು ತಮ್ಮ ಒಂದು ಬಿಲ್ಲಿನಲ್ಲಿ ಅಗ್ರಿಕಲ್‌ಚರ್ ಎನ್ನುವುದನ್ನು ಎಕ್ಸ್‌ಕ್ಲೂಡ್ ಮಾಡಿ ಹೇಳಿದರೆ ಸರಿ. ಕ್ಯಾಜ್ಯುಯಲ್ ಲೇಬರರ್ಸ್ ಇದರಲ್ಲಿ ಬರುವುದಿಲ್ಲ ಎಂದು ಹೇಳಿದ್ದೀರಿ. ಅಗ್ರಿಕಲ್‌ಚರ್ ಒಂದು ಪ್ರೊಫೆಷನ್ ಅಲ್ಲ ಎಂದು ಹೇಗೆ ತಾವು ಹೇಳುತ್ತೀರಿ? ಇದೂ ಕೂಡ ಒಂದು ಉದ್ಯೋಗ. ತಮ್ಮ ಒಂದು ನೋಟಿಫಿಕೇಷನ್ ಪ್ರಕಾರ, ಬುದ್ಧಿವಂತರಾದವರು ತಮ್ಮ ವ್ಯಾಖ್ಯಾನವನ್ನು ಮುಂದುವರಿಸಿ ಬೇರೆ

ವರ್ಗದವರ ಮೇಲೂ ತೆರಿಗೆಯನ್ನು ಹಾಕಬಹುದು ಎನ್ನತಕ್ಕ ಸಂಶಯ ಬರುತ್ತದೆ. ಆದ್ದರಿಂದ ನಾನು ಸಹ ಈ ಒಂದು ಸಂಶಯವನ್ನು ಇಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಯಾರು ಯಾವ ಒಂದು ಉದ್ಯೋಗವನ್ನು ಮಾಡಿ ಅದರಿಂದ ಲಾಭ ಸಂಪಾದನೆ ಮಾಡುತ್ತಾರೆಯೋ ಅವರೆಲ್ಲರೂ ಕೂಡ ಇದರ ವ್ಯಾಪ್ತಿಯಲ್ಲಿ ಬರುತ್ತಾರೆ ಆದ್ದರಿಂದ ದಯವಿಟ್ಟು ತಾವು ಇದರ ಅರ್ಥವನ್ನು ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ಇದರ ಮುಖಾಂತರ ಮತ್ತೆ ವ್ಯವಸಾಯಗಾರರ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಪ್ರಯತ್ನ ನಡೆಯುತ್ತದೆ.

ವ್ಯಾಪಾರಸ್ಥರ ಮೇಲೂ ಈ ಒಂದು ತೆರಿಗೆ ಬೀಳುತ್ತದೆ. ಹಿಂದೆ ಒಂದು ಸಾರಿ ಅವರ ಮೇಲೆ ಸರ್ಚಾರ್ಜ್ ಹಾಕಿದ್ದಾರೆ. ಹತ್ತು ಲಕ್ಷ ರೂಪಾಯಿಗಳ ಮೇಲ್ಪಟ್ಟು ಟರ್ನ್‌ಓವರ್ ಇದ್ದರೆ ಅವರೂ ಸರ್ಚಾರ್ಜ್ ಕೊಡಬೇಕು ಎಂದು ಕಳೆದ ವರ್ಷ ಇದನ್ನು ಹಾಕಿದ್ದಾರೆ. ಮತ್ತೆ ಹಿಂದು ಲಕ್ಷ 50 ಸಾವಿರ ರೂಪಾಯಿಗಳ ಮೇಲೆ ಟರ್ನ್‌ಓವರ್ ಇದ್ದರೆ ಮತ್ತೆ ತೆರಿಗೆಯನ್ನು ಕೊಡಬೇಕು ಎಂದು ಹೇಳುತ್ತೀರಿ. ನಿಜವಾಗಿಯೂ ಎಷ್ಟು ಸಾರಿ ಅವರ ಮೇಲೆ ತೆರಿಗೆಯನ್ನು ಹಾಕುತ್ತೀರಿ ಎಂದು ತಾವು ಯೋಚನೆಮಾಡಬೇಕು. ಅವನು ಆದಾಯ ತೆರಿಗೆ ಕೊಡುತ್ತಾನೆ, ಸರ್ಚಾರ್ಜ್ ಕೊಡುತ್ತಾರೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾದಂಥ ಎಲ್ಲಾ ತೆರಿಗೆಯನ್ನು ಕೊಡುತ್ತಾನೆ. ಈ ಎಲ್ಲಾ ತೆರಿಗೆಯನ್ನು ಯಾವುದಾದರೂ ಒಂದು ವಿಧದ ಮುಖಾಂತರ ಹಾಕಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಒಂದು ವಿಧದಲ್ಲಿ ಅವನ ಶಕ್ತಿಯ ಆಧಾರದ ಮೇಲೆ ತೆರಿಗೆಯನ್ನು ಹಾಕಿದರೆ ಒಳ್ಳೆಯದು. ತಾವುಗಳು ಹಲವಾರು ವಿಧದಿಂದ ತೆರಿಗೆಯನ್ನು ಹಾಕಿದರೆ ಅವನಿಗೆ ಕಿರುಕುಳ ಕೊಟ್ಟಂತಾಗುತ್ತದೆ. ಸೇಲ್ಸ್‌ಟ್ಯಾಕ್ಸಿಗೂ ಟರ್ನ್‌ಓವರ್ ಕೊಡಬೇಕಾಗುತ್ತದೆ ಇನ್‌ಕಂಟ್ಯಾಕ್ಸ್‌ಗೂ ಟರ್ನ್‌ಓವರ್ ಕೊಡಬೇಕಾಗುತ್ತದೆ. ಇದೆಲ್ಲವನ್ನೂ ಬಿಟ್ಟು ಒಂದೇ ಸಾರಿ ಅವನಿಂದ ಎಷ್ಟು ನಿರೀಕ್ಷಣೆ ಮಾಡುತೀರೋ ಅಷ್ಟನ್ನು ಒಂದೇಸಾರಿ ಹಾಕಿದರೆ ಒಳ್ಳೆಯದು. ಒಬ್ಬ ವ್ಯಾಪಾರಸ್ಥ ಸೇಲ್ಸ್‌ಟ್ಯಾಕ್ಸ್‌ನ್ನು ಸುಮಾರು 10 ಸಾವಿರ ರೂಪಾಯಿಗಳ ಮೊತ್ತವನ್ನು ಒಂದು ವರ್ಷದಲ್ಲಿ ಕೊಡುತ್ತಾನೆಂದು ಇಟ್ಟುಕೊಂಡರೂ ಅವನು 250 ರೂಪಾಯಿಗಳ ತೆರಿಗೆಯನ್ನು ಕೊಡುವುದಕ್ಕೆ ಹಿಂದೂ ಮುಂದು ನೋಡುವುದಿಲ್ಲ. ಆಗಾಗ್ಗೆ ರಿಟರ್ನ್ ಕೊಡಬೇಕು ಎಂದು ಹೇಳತಕ್ಕದ್ದಲ್ಲ ಇವರಿಗೆ ಕಿರುಕುಳ ಅನಾವಶ್ಯಕವಾಗಿ ಆಗುತ್ತದೆ. ಸುಮಾರು 50 ಸಾವಿರ ರೂಪಾಯಿಗಳ ಟರ್ನ್ ಓವರ್ ಇರತಕ್ಕವರು ಒಂದು ತಿಂಗಳಿಗೆ ನಾಲ್ಕು ಸಾವಿರ ರೂಪಾಯಿಗಳ ವ್ಯವಹಾರ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಇಷ್ಟು ವ್ಯವಹಾರವನ್ನು ಒಂದು ಚಿಲ್ಲರೆ ಅಂಗಡಿಯವರೂ ಮಾಡುತ್ತಾರೆ. ಇಷ್ಟು ವ್ಯವಹಾರ ಮಾಡಿದರೆ ಅವನಿಗೆ ಗ್ರಾಸ್ ಲಾಭ ಸುಮಾರು 400–500 ರೂ.ಗಳು ಬರಬಹುದು. ಇದರಲ್ಲಿ ಅವನು ಅಂಗಡಿಯ ಬಾಡಿಗೆ, ಎಲೆಕ್ಟ್ರಿಸಿಟಿ ಚಾರ್ಜ್, ಮನೆಯ ಖರ್ಚು ಎಲ್ಲಾ ಕಳೆದರೆ ಅವನು ತನ್ನ ಜೀವನವನ್ನು ನಡೆಸುವುದೂ ಕಷ್ಟವಾಗುತ್ತದೆ. ಹಿಂದೆ ತಾವು ಮಾರಾಟ ತೆರಿಗೆಯನ್ನು ಹಾಕತಕ್ಕ ಕಾಲದಲ್ಲಿ ಇವರಿಗೆ; ಅಂದರೆ, ಇಷ್ಟು ವರಮಾನ ಇರುವವರಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ, 25 ಸಾವಿರ ರೂಪಾಯಿಗಳ ಟರ್ನ್ ಓವರ್ ಯಾರಿಗೆ ಇರಲಿ ಅವರು ಟರ್ನ್ ಓವರ್ ಕೊಡಬೇಕಾಗಿಲ್ಲ ಎಂದು ಇತ್ತು. ಆದರೆ ಈಗ ತಾವು ಈಗ ವರ್ಗದ ವ್ಯಾಪಾರಸ್ಥರಿಗೂ ತೆರಿಗೆಯನ್ನು ಹಾಕಿರುವುದು ನ್ಯಾಯವಲ್ಲ. ಇವರಿಗೆ ವಿನಾಯಿತಿಯನ್ನು ಕೊಡದೆ ತೆರಿಗೆಯನ್ನು ಹಾಕುವುದಕ್ಕೆ ಹೋದರೆ ಅವರು ಪರದೇಶಿಗಳಾಗುತ್ತಾರೆ. ಈಗ 50 ಸಾವಿರ ರೂಪಾಯಿಗಳ ಟರ್ನ್ ಓವರ್ ಇರತಕ್ಕವರು ಮಾರಾಟ ತೆರಿಗೆಯನ್ನು ಕೊಡುತ್ತಿದ್ದಾರೆ. ಇವರಿಗೂ ಈಗ ಪ್ರೊಫೆಷನಲ್ ಟ್ಯಾಕ್ಸ್ ಕೊಡಿ ಎಂದರೆ ಹೇಗೆ ? ಇವರು ಯಾವ ಒಂದು ದೊಡ್ಡ ಸಂಪಾದನೆಯನ್ನು ಮಾಡುತ್ತಿದ್ದಾರೆ?

10–00 A.M.

ಇವತ್ತು ನೀವು ಈ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಯಾರಿಗೆ ಹಾಕುತ್ತಿದ್ದೀರಿ ಎಂದರೆ ಬಡವರ ಮೇಲೆ. ಆದರೆ ಇದನ್ನು ಯಾರ ಮೇಲೆ ಹಾಕಬೇಕು ಎಂದರೆ ದೊಡ್ಡ ದೊಡ್ಡ ಕಂಪೆನಿಗಳಲ್ಲಿರತಕ್ಕ ಡೈರೆಕ್ಟರ್, ಮ್ಯಾನೇಜರ್, ಇಂಥವರ ಮೇಲೆ ಹಾಕಬೇಕು ಇವತ್ತು ಅಶೋಕ ಹೋಟೆಲ್, ಸೆವೆನ್ ಸ್ಕ್ವಾರ್ ಇಂಥ ಹೋಟೆಲ್‌ಗಳಲ್ಲಿ ಹೋಗಿ ಕ್ಯಾಬರೆ ನೋಡುವವರ ಮೇಲೆ 40 ಪರ್ಸೆಂಟ್ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತಿದ್ದೀರಿ. ಅದನ್ನು ಹಾಕಿ, ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ಇವತ್ತು ನೀವು ಅಶೋಕ ಹೋಟೆಲ್; ಸೆವೆನ್‌ಸ್ಕ್ವಾರ್ ಹೋಟೆಲ್‌ಗಳಲ್ಲಿ ಹೋಗಿ ನೋಡುವುದಾದರೆ

ಅಲ್ಲಿಗೆ ಯಾರು ಬರುತ್ತಾರೆ ಎಂದರೆ, ಸಾರ್ವಜನಿಕ ಸಂಸ್ಥೆಗಳ ಡೈರೆಕ್ಟರ್‌ಗಳು, ಮ್ಯಾನೇಜಿಂಗ್ ಡೈರೆಕ್ಟರ್‌ಗಳು, ಛೇರ್ಮನ್‌ಗಳು, ಸರ್ಕಾರದ ಉನ್ನತ ಅಧಿಕಾರಿಗಳು ಮುಂತಾದವರು ಜಾಸ್ತಿ ಹೋಗುತ್ತಾರೆ. ಅದರ ಜೊತೆಗೆ ಕೆಲವು ಮಂತ್ರಿಗಳೂ ಕೂಡ ಹೋಗುತ್ತಾರೆ. ಪಾಪ ಕೆಲವು ಮಂತ್ರಿಗಳಿಗೆ ಅಂಥ ಹೋಟೆಲ್‌ಗಳಿಗೆ ಹೋಗದಿದ್ದರೆ ಎಂಟರ್‌ಟೇನ್‌ಮೆಂಟ್ ಸಿಕ್ಕದಿದ್ದರೆ ಅವರ ತಲೆ ಓಡುವುದಿಲ್ಲ ಎಂದು ಕಾಣುತ್ತದೆ. ಇಂಥ ಹೋಟೆಲ್‌ಗಳಲ್ಲಿ ಅವರಿಗೆ ಸರಿಯಾಗಿ ಒಳ್ಳೆಯ ಪಾರ್ಟಿಗಳು, ಇತರೇ ವ್ಯವಸ್ಥೆಗಳು ಆದರೆ ಅವರಿಗೆ ತಲೆ ಚುರುಕಾಗಿರುತ್ತದೆ, ತಲೆ ಓಡುತ್ತದೆ, ತಕ್ಷಣ ಯಾವುಯಾವುದನ್ನು ಮಂಜೂರು ಮಾಡಬೇಕೋ ಅದನ್ನು ಮಾಡುತ್ತಾರೆ. ಇವತ್ತು ಸರ್ಕಾರದಲ್ಲಿ ಇಂಥ ಮಂತ್ರಿಗಳೂ ಕೂಡ ಕೆಲವರಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಅಶೋಕ ಹೋಟೆಲ್, ಸೆವೆನ್ ಸ್ಟಾರ್ ಇಂಥ ಹೋಟೆಲ್‌ಗಳಿಗೆ ಹೋಗುವವರು ಶ್ರೀಮಂತರುಗಳೇ ಆದುದರಿಂದ ಅಂಥವರ ಮೇಲೆ ಹಾಕಿ, ಅವರೂ ಕೂಡ ತಮ್ಮ ಜೇಬಿನಿಂದ ಹಣವನ್ನು ಖರ್ಚು ಮಾಡುವುದಿಲ್ಲ. ಅವರು ಮಾಡುವುದು ಸರ್ಕಾರದ ಹಣವನ್ನೋ ಅಥವಾ ಇತರರ ಜೇಬಿನಲ್ಲಿರುವ ಹಣವನ್ನೋ ಖರ್ಚುಮಾಡುತ್ತಾರೆ. ಬೇಕಾದರೆ ತಾವು ಹೋಗಿ ನೋಡಿದರೆ, ವಾಸ್ತವಾಂಶ ಏನು ಎಂಬುದು ತಮಗೆ ಗೊತ್ತಾಗುತ್ತದೆ. ಈ ವಿಷಯವನ್ನು ಫಿಲಂ ಡೆವಲಪ್‌ಮೆಂಟ್ ಬಗ್ಗೆ ಚರ್ಚೆಯಾಗತಕ್ಕ ಕಾಲದಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ರಿಪೋರ್ಟ್‌ನಲ್ಲಿ ಸಾರ್ವಜನಿಕ ಸಂಸ್ಥೆಗಳ ಪ್ರತಿನಿಧಿಗಳು ಯಾರ್ಯಾರು ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂಬುದನ್ನು ಹೇಳಿದ್ದಾರೆ ಇವತ್ತು ಏನಾಗಿದೆ ಎಂದರೆ ನಾವು ಸಾರ್ವಜನಿಕ ಸಂಸ್ಥೆಗಳ ಮೇಲೆ ಹಣವನ್ನು ತೊಡಗಿಸಿದರೆ, ಅವರು ಇಂಥ ಹೋಟೆಲುಗಳಲ್ಲಿ, ಪಾರ್ಟಿಗಳಲ್ಲಿ ಖರ್ಚು ಮಾಡುತ್ತಿದ್ದಾರೆ. ಇವತ್ತು ನೀವು ಟ್ಯಾಕ್ಸ್ ಹಾಕುವುದಕ್ಕೆ ನಾವು ಬೇಡ ಎನ್ನುವುದಿಲ್ಲ. ಆದರೆ ಯಾರ ಮೇಲೆ ಟ್ಯಾಕ್ಸ್ ಹಾಕಬೇಕೋ ಅವರ ಮೇಲೆ ಹಾಕಿ, ಅವರು ಮಾಡುವ ಖರ್ಚಿನ ಮೇಲೆ ಹಾಕಿ, ಯಾರು ಬಿಲ್‌ನ್ನು ಕೊಡುತ್ತಾರೆ ಅವರನ್ನು ಹಿಡಿದು ಅವರ ಮೇಲೆ ಹಾಕಿ ಸ್ವಾಮಿ ಇವತ್ತು ಅಶೋಕ ಹೋಟೆಲ್‌ನಲ್ಲಿ ಒಂದು ಟೀ ಗೆ 2 ರೂಪಾಯಿ ಕೊಡಬೇಕು. ನಾವೂ ಕೂಡ ಒಂದು ದಿವಸ ಅಲ್ಲಿ ಟೀ ಕುಡಿದಿದ್ದೇವೆ. ಆದುದರಿಂದ ಈ ಮಾತನ್ನು ಹೇಳುತ್ತೇನೆ. ಇಂಥ ಹೋಟೆಲ್‌ಗಳಿಗೆ ಯಾರು ಹೋಗುತ್ತಾರೆ ಅವರ ಮೇಲೆ ತೆರಿಗೆ ಹಾಕಿ. ಆದರೆ ಇವತ್ತು ನೀವು ಹಾಕುತ್ತಿರುವುದು ಎಂದರೆ ಸಣ್ಣ ಬೀಡಿ ಅಂಗಡಿ ಇಟ್ಟುಕೊಂಡಿರುವವರ ಮೇಲೆ, ಎಲೆ, ಅಡಿಕೆ ಅಂಗಡಿ ಇಟ್ಟುಕೊಂಡಿರುವವರ ಮೇಲೆ, ಸಣ್ಣ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿರುವವರ ಮೇಲೆ, ಆದುದರಿಂದ ನಾನು ಹೇಳುವುದೇನೆಂದರೆ ಇಂಥ ಸಣ್ಣಪುಟ್ಟವರ ಮೇಲೆ ಏನು ಈ ಒಂದು ತೆರಿಗೆಯನ್ನು ಹಾಕುವುದಕ್ಕೆ ಹೊರಟಿದ್ದೀರಿ, ಇದನ್ನು ದಯವಿಟ್ಟು ಕೈಬಿಡಿ; ಇವತ್ತು ಏನಾಗಿದೆ ಎಂದರೆ ನಿಮ್ಮ ಸೇಲ್ಸ್‌ಟ್ಯಾಕ್ಸ್ ಆಫೀಸರ್‌ಗಳು ಈ ಸಣ್ಣಪುಟ್ಟ ವ್ಯಾಪಾರಗಾರರ ಚರ್ಮವನ್ನು ಸುಲಿಯುತ್ತಿದ್ದಾರೆ. ಈ ಬಡಪಾಯಿಗಳ ಮೇಲೆ ಏನು ಈ ಒಂದು ಟ್ಯಾಕ್ಸ್‌ನ್ನು ಹಾಕಬೇಕೆಂಬ ಪ್ರಯತ್ನವನ್ನು ಇಟ್ಟುಕೊಂಡಿದ್ದೀರಿ ಇದು ನಿಜವಾಗಿಯೂ ಕೂಡ ಒಳ್ಳೆಯದಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ ನಿಮ್ಮ ಕೈಗೆ ಯಾರು ಸರಿಯಾಗಿ ಸಿಕ್ಕುತ್ತಾರೆ ಅವರ ಮೇಲೆ ಈ ತೆರಿಗೆಯನ್ನು ಹಾಕುತ್ತೀರಿ, ಆದರೆ ಯಾರು ಹೆಚ್ಚಿಗೆ ಸಂಪತ್ತನ್ನು ಗಳಿಸಿದ್ದಾರೆ, ಗಳಿಸುತ್ತಿದ್ದಾರೆ, ಅವರ ಮೇಲೆ ಈ ತೆರಿಗೆಯನ್ನು ಹಾಕುತ್ತಿಲ್ಲ.

ಇವತ್ತು ತಮಗೆ ಒಂದು ಮಾತನ್ನು ಹೇಳುತ್ತೇನೆ. ಅನೇಕ ಖಾಸಗೀ ಕಂಪೆನಿಗಳಲ್ಲಿ ಇರತಕ್ಕ ಡೈರೆಕ್ಟರ್‌ಗಳು, ಮ್ಯಾನೇಜರ್‌ಗಳು, ಅಕೌಂಟೆಂಟ್‌ಗಳು ಎಷ್ಟು ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬುದನ್ನು ತಾವು ನೋಡಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಇಂಡಿಯನ್ ಪ್ಲೈವುಡ್ ಫ್ಯಾಕ್ಟರಿಯಲ್ಲಿ ಇರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ 7 ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾರೆ. ಇದರ ಜೊತೆಗೆ ಫ್ರೀ ಕ್ವಾರ್ಟರ್ಸ್ ಕೊಡುತ್ತಾರೆ, ಅವರಿಗೆ ಓಡಾಟದ ಭತ್ಯವನ್ನು ಕೊಡುತ್ತಾರೆ. ಅವರು ಇಲ್ಲಿಗೆ ಬಂದರೆ ಅಶೋಕ ಹೋಟೆಲ್‌ನಲ್ಲಿ ಉಳಿದುಕೊಳ್ಳುವುದಕ್ಕೆ ಖರ್ಚು ಕೊಡುತ್ತಾರೆ. ಅವರು ಯಾವಾಗ ಬಂದರೂ ಕೂಡ ಅಶೋಕ ಹೋಟೆಲ್, ವೆಸ್ಟೆಂಡ್ ಹೋಟೆಲ್‌ಗಳಲ್ಲಿಯೇ ಉಳಿದುಕೊಳ್ಳುತ್ತಾರೆ. ಈ ಖರ್ಚುಗಳನ್ನೆಲ್ಲಾ ಕಂಪನಿಯವರೇ ಕೊಡುತ್ತಾರೆ. ಸ್ವಾಮಿ, ಇವತ್ತು ನಿಮ್ಮ ಸರ್ಕಾರದಲ್ಲ ಕಮೀಷನರ್ ಏನಿದ್ದಾರೆ ಅವರಿಗೆ ಹೆಚ್ಚು ಎಂದರೆ 2000 ರೂಪಾಯಿಗಳ ಒಳಗೇ ಸಂಬಳ ಬರುತ್ತದೆ. ಆದರೆ ಅದೇ ಈ

ಫ್ಯಾಕ್ಟರಿಯಲ್ಲಿರತಕ್ಕ ಮ್ಯಾನೇಜರ್‌ರವರಿಗೆ ಮೂರು ಸಾವಿರ. ಮೂರೂವರೆ ಸಾವಿರ ರೂಪಾಯಿ ಸಂಬಳ ಬರುತ್ತದೆ. ಅವರು ಐ.ಎ.ಎಸ್, ಕೂಡ ಪಾಸ್ ಮಾಡಿಲ್ಲ. ಇನ್ನೊಂದು ಹೇಳಬೇಕೆಂದರೆ ಹರಿಹರದಲ್ಲಿರುವ ಪಾಲಿಫೈಬರ್ ಕಂಪೆನಿಯಲ್ಲಿ ಮ್ಯಾನೇಜರ್ ನಿಮ್ಮ ಸರ್ಕಾರದಲ್ಲಿರುವ ಚೀಫ್ ಸೆಕ್ರೆಟರಿಯವರ ಸಂಬಳಕ್ಕಿಂತ ಎರಡರಷ್ಟು ತೆಗೆದುಕೊಳ್ಳುತ್ತಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಿಮ್ಮ ಸರ್ಕಸ್ ಏನಿದೆ ಅದನ್ನು ಇಂಥ ದೊಡ್ಡ ದೊಡ್ಡ ಕಂಪನಿಗಳಲ್ಲಿರತಕ್ಕ ಹೆಚ್ಚಿಗೆ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳ ಮೇಲೆ ಏತಕ್ಕೆ ತೋರಿಸುತ್ತಿಲ್ಲ ಎಂದು.

ಶ್ರೀ ಎಂ. ವೈ. ಘೋರ್ಪಡೆ.—ಈ ಸಂದರ್ಭದಲ್ಲಿ ಅವರ ಮೇಲೆ ಎಷ್ಟು ತೆರಿಗೆ ಹಾಕುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನೂ ಹಾಕುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಹೆಚ್ಚಿಗೆ ಸಂಬಳ ತೆಗೆದುಕೊಳ್ಳುವವರಿಗೆ ಈ ತೆರಿಗೆಯನ್ನು ಹಾಕಿ ಯಾರು ಕಡಿಮೆ ಸಂಬಳದವರಿದ್ದಾರೆ ಅವರಿಗೆ ತೊಂದರೆಯಾಗದ ರೀತಿಯಲ್ಲಿ ಇನ್ನೂ ಯಾವುದಾದರೂ ರೀತಿಯಲ್ಲಿ ಸುಲಭವಾದ ಬದಲಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡಿ. ಇವತ್ತು ಅಲ್ಲಿ ಕಂಪೆನಿಯಲ್ಲಿ 7 ಸಾವಿರ ರೂಪಾಯಿ ಸಂಬಳ ಜೊತೆಗೆ ಇತರ ಪ್ರಿವಿಲೇಜಸ್ ತೆಗೆದುಕೊಳ್ಳುವವರೂ 250 ರೂಪಾಯಿ ತೆರಿಗೆ ಕೊಡಬೇಕು, ಇಲ್ಲಿರುವ ಈ ಬಡಪಾಯಿಯೂ 250 ರೂಪಾಯಿ ತೆರಿಗೆಯನ್ನು ಕೊಡಬೇಕು ಎಂದರೆ ಯಾವ ನ್ಯಾಯ? ಪಾಪ, ಇವನು ಅಶೋಕ ಹೋಟೆಲ್‌ಗೆ ಒಂದು ಸಾರಿ ಹೋಗಿ ಬರಬೇಕಾದರೆ ಬಹಳ ಕಷ್ಟವಾಗುತ್ತದೆ. ಅದೂ ಅಲ್ಲದೆ ಈಗಂತೂ ಅಂಥ ಕಡೆ ಇವನು ಸಿಕ್ಕಿ ಹಾಕಿಕೊಂಡರೆ ಬಹಳ ಕಷ್ಟವಾಗುತ್ತದೆ, ಆದುದರಿಂದ ನಾನು ಹೇಳುವುದೇನೆಂದರೆ ಈಗ ಈ ಸಣ್ಣಪುಟ್ಟ ಬೀಡಿ ಅಂಗಡಿ ಮುಂತಾದುವುಗಳನ್ನು ಇಟ್ಟುಕೊಂಡಿರುವವರು ಏನಿದ್ದಾರೆ ಅವರಿಗೆ ತಮ್ಮ ಕಾನೂನು ವ್ಯಾಪ್ತಿಯಲ್ಲಿ ಏನಾದರೂ ಬದಲಾವಣೆ ಮಾಡಿ ನ್ಯಾಯವಾದ ರೀತಿಯಲ್ಲಿ ಈ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಹಾಕಿ. ಇದರಿಂದ ತಮಗೆ ಸ್ವಲ್ಪ ತ್ರಾಸ ಆದರೂ ಚಿಂತೆ ಇಲ್ಲ. ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯಿರಿ. ತಾವು ಆರ್ಥಿಕ ತಜ್ಞತೆಯನ್ನು ಪಡೆದವರು. ಈ ಆರ್ಥಿಕ ತಜ್ಞತೆಯನ್ನು ಉಪಯೋಗಿಸಿಕೊಂಡು ಉತ್ತಮವಾದ ಆದಾಯವನ್ನು ಯಾರ್ಯಾರು ಪಡೆಯುತ್ತಿದ್ದಾರೆ ಅಂಥವರ ಮೇಲೆ ಈ ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿ, ಸಾಧ್ಯವಾದರೆ ಈ ಬಗ್ಗೆ ಒಂದು ಸೆಲೆಕ್ಟ್ ಕಮಿಟಿಯನ್ನು ನೇಮಕ ಮಾಡಿ ಅದರಲ್ಲಿ ಕೂಲಂಕಷವಾಗಿ ಯೋಚನೆ ಮಾಡಿ. ತಾವು ಒಳ್ಳೆಯ ಆರ್ಥಿಕ ತಜ್ಞರಾಗಿ ಅನೇಕ ಆರ್ಟಿಕಲ್ಸ್ ಬರೆದಿದ್ದೀರಿ, ಅವುಗಳನ್ನು ನಾನು ಓದಿದ್ದೇನೆ. ಇವತ್ತು ತಾವು ಕೇವಲ ಒಬ್ಬ ಸಾಧಾರಣವಾದ ಹಣಕಾಸಿನ ಸಚಿವರು ತೆರಿಗೆಯನ್ನು ಹಾಕುವ ರೀತಿಯಲ್ಲಿ ಹೋಗದೆ ತಮ್ಮ ಉತ್ತಮವಾದ ಆರ್ಥಿಕ ಜ್ಞಾನ ಏನಿದೆ ಅದನ್ನು ಉಪಯೋಗಿಸಿಕೊಂಡು ಈ ವಿಷಯವನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ, ಇವತ್ತು ನಮ್ಮ ದೇಶ ಸಮತಾವಾದ ಸಮಾಜದ ದಾರಿಯಲ್ಲಿ ಹೋಗಬೇಕೆಂದು ಒಂದು ಕಲ್ಪನೆಯನ್ನು ಇಟ್ಟುಕೊಂಡಿದ್ದೇವೆ, ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಯಾರು ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತಾರೆ, ಯಾರ ಮೇಲೆ ಈ ತೆರಿಗೆಯನ್ನು ಹಾಕಬೇಕೆಂದು ಯೋಚನೆ ಮಾಡಿ ಅವರ ಮೇಲೆ ಹಾಕಿ ತೆರಿಗೆಯನ್ನು ತೆಗೆದುಕೊಳ್ಳಿ ಇಂಥಾದನ್ನು ನೀವು ಎಕ್ಸ್‌ಪ್ಲಾಯಿಟ್ ಮಾಡಿ ಎಂದು ಹೇಳುತ್ತೇನೆ. ಇದಕ್ಕೆ ಮೊದಲು ಈ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಆಯಾ ಸ್ಥಳೀಯ ಸಂಸ್ಥೆಗಳೇ ವಸೂಲು ಮಾಡಿಕೊಳ್ಳುತ್ತಿದ್ದವು. ಈಗ ಇದನ್ನೂ ತಾವೇ ತೆಗೆದುಕೊಳ್ಳುತ್ತಿದ್ದೀರಿ. ಇದು ಸರಿಯಾದ ಮಾರ್ಗವಲ್ಲ ಆದುದರಿಂದ ದಯವಿಟ್ಟು ತಾವು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಇಂಥ ಒಂದು ಪ್ರಯತ್ನವನ್ನು ರಾಜ್ಯದಲ್ಲಿ ಮಾಡುತ್ತಿರುವಾಗ, ಸ್ವಲ್ಪಮಟ್ಟಿಗೆ ಒಂದು ಸಮಗ್ರವಾದಂಥ ತೆರಿಗೆಯ ಮಸೂದೆಯನ್ನು ತರತಕ್ಕಂಥ ಒಂದು ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಅದರಲ್ಲೂ ಕೂಡ ಅನೇಕ ಮಾನ್ಯ ಮಿತ್ರರು ಹೇಳಿದ್ದಾರೆ, ಶಾಸನ ಸಭೆಯಲ್ಲಿರುವ ಅನೇಕ ಮಿತ್ರರು ವಕೀಲಿ ವೃತ್ತಿಯನ್ನೇ ಕುಠಾರ ಪ್ರಾಯವಾಗಿ ಮಾಡುತ್ತಿರುವಾಗ ಅವರ ಅಭಿಪ್ರಾಯವನ್ನು ಏತಕ್ಕೆ ಕೇಳಬೇಕು, ನಾವು ಅವರನ್ನು ಸುಮ್ಮನೆ ಈ ವೃತ್ತಿಯನ್ನು ಮಾಡಿ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ, ಇಲ್ಲಿ ಸುಮಾರು 40 ಜನರು ಈ ಪ್ರೊಫೆಷನ್‌ನ್ನು ಅವಲಂಬಿಸಿರಬಹುದು. ಆದುದರಿಂದ ಈ ವೃತ್ತಿಯನ್ನು ತೀರ ಅಷ್ಟೊಂದು ನಿಕೃಷ್ಟವಾಗಿ ಕಾಣ

ಬಾರದೆಂದು ನನ್ನ ಅಭಿಪ್ರಾಯವಾಗಿರುತ್ತದೆ. ಇದೇ ಒಂದು ದಂಧೆಯಾಗಿ ಮಾಡುತ್ತಾ ಇರತಕ್ಕಂಥಾದ್ದು ತಮ್ಮ ಅನುಭವಕ್ಕೆ ಗೊತ್ತಿರುತ್ತದೆ. ಆದ್ದರಿಂದ ದಯವಿಟ್ಟು ವಕೀಲಿ ವೃತ್ತಿಗೆ ಹಾಕಿರುವ ಪ್ರೊಫೆಷನಲ್ ಟ್ಯಾಕ್ಸನ್ನು ತಪ್ಪಿಸಬೇಕೆಂದು ಹೇಳಬಯಸುತ್ತೇನೆ. ಇನ್‌ಕಮ್‌ಟ್ಯಾಕ್ಸ್ ಕೊಡುತ್ತಿರುವ ಅನೇಕ ವಕೀಲರುಗಳು ಇದ್ದಾರೆ, ಅಂಥವರಿಗೆ ಪ್ರೊಫೆಷನಲ್ ಟ್ಯಾಕ್ಸನ್ನು ಹಾಕಿ ಬೇಡವೆಂದು ಹೇಳುವುದಿಲ್ಲ, ಎಲ್ಲರಿಗೂ ಟ್ಯಾಕ್ಸನ್ನು ಹಾಕುವುದು ಬೇಡ ಇದನ್ನು ಸಂಪೂರ್ಣವಾಗಿ ಕೈಬಿಡಬೇಕೆಂದು ಹೇಳುತ್ತೇನೆ,

ಇನ್ನು ಯುನಾನಿ ಮತ್ತು ಆಯುರ್ವೇದಿಕ್ ಡಾಕ್ಟರುಗಳ ಮೇಲೆ ವೃತ್ತಿ ತೆರಿಗೆಯನ್ನು ವಿಧಿಸಿದ್ದೀರಿ. ಅವರು ಕೇರಳದಲ್ಲೋ ಎಲ್ಲೋ ಸರ್ಟಿಫಿಕೇಟ್ ಕೋರ್ಸ್‌ನ್ನು ಮಾಡಿಕೊಂಡು ಸಣ್ಣ ಸಣ್ಣ ಶಾಪ್‌ಗಳನ್ನು ತೆಗೆದು ಚೂರ್ಣ ಮತ್ತು ಲೇಹ್ಯಗಳನ್ನು ಇಟ್ಟುಕೊಂಡು ಕುಳಿತಿರುತ್ತಾರೆ. ಅಂಥವರ ಮೇಲೆ 50 ರೂಪಾಯಿಗಳಿಂದ 100 ರೂಪಾಯಿಗಳವರೆಗೆ ಟ್ಯಾಕ್ಸನ್ನು ಹಾಕಿದರೆ ಅವರು ಎಲ್ಲಿಂದ ಕೊಡಬೇಕು? ಖಂಡಿತವಾಗಿಯೂ ಇದು ತಮ್ಮ ಆತ್ಮಕ್ಕೆ ಮೆಚ್ಚುಗೆಯಾಗುತ್ತದೆಯೇ ಎಂದು ಕೇಳುತ್ತೇನೆ. ಇದನ್ನು ದೇವರೂ ಕೂಡ ಮೆಚ್ಚುವುದಿಲ್ಲ. ಆದುದರಿಂದ ಈಗತಾನೆ ಬೆಳೆಯುತ್ತಿರುವ ಈ ಒಂದು ಉದ್ಯೋಗಕ್ಕೆ ಉತ್ತೇಜನವನ್ನು ಕೊಡುವ ಸಲುವಾಗಿಯಾದರೂ, ಎಲ್ಲೋ ಕೆಲವು ಜನ ಜೀವನೋಪಾಯಕ್ಕೆ ಅವಲಂಬಿಸಿರುವ ಈ ವೃತ್ತಿಯ ಮೇಲೆ ತೆರಿಗೆಯನ್ನು ಹಾಕುವುದು ನ್ಯಾಯವಲ್ಲವೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗಲೂ ಕೂಡ ಕೆಲವು ಆಯುರ್ವೇದಿಕ್ ಪಂಡಿತರು ದುಡ್ಡನ್ನು ತೆಗೆದುಕೊಳ್ಳದೆ ಔಷಧಿಯನ್ನು ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಸೊರಬ ತಾಲ್ಲೂಕಿನಲ್ಲಿ ಈಗಲೂ ಕೂಡ ಒಬ್ಬರು ನಾಡಿಗೇರ್ ನಂಜುಂಡಯ್ಯ ಎನ್ನುವವರು ಇದ್ದಾರೆ. ಅವರಿಗೆ ಒಂದು ತೆಂಗಿನಕಾಯನ್ನು ಕೊಟ್ಟರೆ ಸಾಕು ಅವರಿಗೆ ಔಷದಿಯನ್ನು ತಯಾರಿಸಲು ಬೇಕಾದ ವಸ್ತುಗಳನ್ನು ಕೊಟ್ಟರೆ ಸಾಕು ಒಳ್ಳೆಯ ಔಷಧಿಯನ್ನು ತಯಾರುಮಾಡಿ ಕೊಡುತ್ತಾರೆ. ಈ ರೀತಿಯ ವೃತ್ತಿಯನ್ನು ಅವಲಂಬಿಸಿರುವವರು ಎಷ್ಟೋ ಜನರು ಇರುತ್ತಾರೆ. ಅಂಥವರಿಗೆ ವೃತ್ತಿ ತೆರಿಗೆಯನ್ನು ಹಾಕುವುದರಿಂದ ಏನು ಪ್ರಯೋಜನವಾಗುತ್ತದೆಂದು ಹೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ,— ನನಗೆ ಒಂದು ವಿಪರೀತವಾದ ಒಂದು ಕಾಯಿಲೆ ಇದ್ದು ನಾನು ಎಲ್ಲ ಪ್ರಯತ್ನವನ್ನು ಮಾಡಿಬಿಟ್ಟೆ. ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಎಲ್ಲ ಕಡೆಯೂ ಕೂಡ ತೋರಿಸಿದೆ, ಎಲ್ಲೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಒಬ್ಬರು ಪಂಡಿತರಿಂದ ಔಷಧವನ್ನು ತೆಗೆದುಕೊಂಡಿದ್ದರಿಂದ ಎಷ್ಟೋ ಉತ್ತಮವಾಯಿತು. ಇದರಿಂದ ನಿಜವಾಗಿಯೂ ಕೂಡ ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡಿ ಬಂದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ ಇಂಥ ಆಯುರ್ವೇದಿಕ್ ಮತ್ತು ಯುನಾನಿ ಪಂಡಿತರನ್ನು ಸಂಪೂರ್ಣವಾಗಿ ಈ ಕಾಯಿದೆಯಿಂದ ಕೈಬಿಡಬೇಕೆಂದು ಹೇಳುತ್ತೇನೆ. ಅಂಥವರಿಗೆ ಮತ್ತಷ್ಟು ಉತ್ತೇಜನವನ್ನು ಕೊಟ್ಟು ಈ ವೃತ್ತಿಯನ್ನು ಅಭಿವೃದ್ಧಿಪಡಿಸಬೇಕು, ಅವರು ವರ್ಷಕ್ಕೆ 50 ರೂಪಾಯಿಗಳಷ್ಟು ವೃತ್ತಿ ತೆರಿಗೆಯನ್ನು ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ನಿಮಗೇನೋ 50ರೂಪಾಯಿಗಳು ಬಹಳ ಸುಲಭವಾಗಿ ಕಾಣಬಹುದು ಅವರಿಗೆ ಅದೇ 50ರೂಪಾಯಿಗಳು ಉಳಿದರೆ ವರ್ಷದಲ್ಲಿ ತಮ್ಮ ಮಕ್ಕಳಿಗೆ 2 ಬಟ್ಟೆಯನ್ನು ಹೊಲಿಸುವುದಕ್ಕೆ ಅನುಕೂಲವಾಗುತ್ತದೆ. ಶಾಸನ ಸಭೆಯ ಸದಸ್ಯರು 600 ರೂಪಾಯಿಗಳಷ್ಟು ಸಂಬಳವನ್ನು ತೆಗೆದುಕೊಳ್ಳುವವರು ತಿಂಗಳಿಗೆ 25 ರೂಪಾಯಿಗಳನ್ನು ಕೊಡಲಿ, ಬೇಡವೆಂದು ಹೇಳುವುದಿಲ್ಲ, ಮಂತ್ರಿಗಳು ಟ್ಯೂರ್ ಹೋಗುತ್ತಾರೆ, ಟಿ.ಬಿ.ಗಳಲ್ಲಿ ಇಳಿದುಕೊಳ್ಳುತ್ತಾರೆ, ವಸತಿ ಊಟ ಇವೆಲ್ಲವೂ ಉಚಿತವಾಗಿಯೇ ಆಗುತ್ತದೆ. ನಿಮ್ಮಂಥವರು ಕೊಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಸಚಿವರುಗಳು ಇನ್‌ಕಮ್ ಟ್ಯಾಕ್ಸ್ ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಇನ್‌ಕಮ್ ಟ್ಯಾಕ್ಸ್ ಪ್ರಶ್ನೆ ಬರುವುದಿಲ್ಲ, ಅಧ್ಯಕ್ಷರೇ ಒಂದು ವಿಷಯವನ್ನು ಹೇಳುತ್ತೇನೆ. ಮಂತ್ರಿಗಳು ಪ್ರವಾಸ ಮಾಡುತ್ತಾರೆ, ಪ್ರವಾಸ ಭತ್ಯವೆಂದು ಒಂಬತ್ತುಸಾವಿರದಿಂದ ಐದು ಸಾವಿರದವರೆಗೂ ತೆಗೆದುಕೊಳ್ಳುತ್ತಾರೆ. ಅವರ ಮೇಲೆ ತಿಂಗಳಿಗೆ 50

ಪರ್ಸೆಂಟ್ ಟ್ಯಾಕ್ಸನ್ನು ಹಾಕಿ ನೋಡೋಣ, ಅದರ ಪರಿಣಾಮವೇನಾಗುತ್ತದೆಂದು ತಮಗೇನೇ ತಿಳಿಯುತ್ತದೆ, ಯಾವ ಮಂತ್ರಿಗಳೇ ಆಗಲಿ ಸುಮ್ಮನೆ ತಮ್ಮ ಕೈಯಿಂದ ಖರ್ಚುಮಾಡಿಕೊಂಡು ಪ್ರವಾಸ ಮಾಡುವುದಿಲ್ಲ. ಆದ್ದರಿಂದ ಅಧ್ಯಕ್ಷರೆ, ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ, ಈಗ ತಂದಿರತಕ್ಕ ಮಸೂದೆಯಲ್ಲಿ ಅನೇಕ ಲೋಪದೋಷಗಳು ಇರುತ್ತವೆ | ಕೊಡುವುದಕ್ಕೆ ಶಕ್ತಿ ಇಲ್ಲದವರ ಮೇಲೆ ವೃತ್ತಿ ತೆರಿಗೆಯನ್ನು ವಿಧಿಸಿರುವುದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿರುವುದ ರಿಂದ ಈ ಮಸೂದೆಯನ್ನು ವಾಪಸ್ ಪಡೆದು, ಪುನರ್‌ಪರಿಶೀಲನೆಮಾಡಿ ಸದ್ಯ ಇದನ್ನು ತಡೆದು ನಿಧಾನವಾಗಿ ತರಬೇಕೆಂದು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ). ಮಾನ್ಯ ಅಧ್ಯಕ್ಷರೇ ಹಣಕಾಸಿನ ಸಚಿವರು ಮಂಡಿಸಿರತಕ್ಕಂಥ ಈ ಮಸೂದೆಯನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಹೇಳ ಬಯಸುತ್ತೇನೆ. ಈ ಬಡ್ಜೆಟ್ ಭಾಷಣದಲ್ಲಿ ಕೂಡ ಹೇಳಿರುತ್ತಾರೆ, ತೆರಿಗೆಯನ್ನು ಹಾಕಿರುವುದು ಬಡವರಿಗೆ ದುರ್ಬಲವರ್ಗದವರಿಗೆ ಅನುಕೂಲ ಮಾಡುವುದಕ್ಕೋಸ್ಕರವಾಗಿ ತೆರಿಗೆಯನ್ನು ಹಾಕುತ್ತಿದ್ದೇವೆಂದು ಹೇಳಿ, ಇದೇ ಒಂದು ದಂದೆಯಾಗಿಟ್ಟುಕೊಂಡು ತೆರಿಗೆಯ ಹೊರೆಯನ್ನು ಹೊರಿಸಿದ್ದಾರೆ. ಮಾನ್ಯ ಸಚಿವರು ಈಗಾಗಲೇ ಮೊನ್ನೆ ತಾನೆ ಎಜ್ಯುಕೇಶನ್ ಸೆಸ್, ಹೆಲ್ತ್ ಸೆಸ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್, ಇವೆಲ್ಲವನ್ನು ವಿಧಿಸಿ ಮತ್ತೆ ವೃತ್ತಿ ತೆರಿಗೆ ಯನ್ನು ವಿಧಿಸಿದ್ದಾರೆ. ಇಷ್ಟರಲ್ಲಿ, ಅರ್ಬನ್ ಟ್ಯಾಕ್ಸ್ ಬರುವುದರಲ್ಲಿದೆ. ಇದರಿಂದ ಏನಾಗುತ್ತಿದೆ ಎಂದರೆ ದುರ್ಬಲ ವರ್ಗದವರಿಗೆ; ಬಡವರಿಗೆ ಬೀಳುತ್ತಿರುವ ತೆರಿಗೆಯ ಹೊರೆ. ಸಾಮಾನ್ಯವಾಗಿ ಯಾರೂ ಕೈಯಿಂದ ಕೊಡುವುದಕ್ಕೆ ಪ್ರಯತ್ನಪಡುವುದಿಲ್ಲ, ಇನ್ನೊಬ್ಬರಿಂದ ಹೇಗಾದರೂ ಪಡೆದು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಈಗ ವಿಧಿಸುತ್ತಿರುವ ಪ್ರೊಫೇಷನಲ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಉದಾಹರಣೆಗೆ ಲಾಯರ್ಸ್ ಅವರು ಏನು ಮಾಡುತ್ತಾರೆ ಎಂದರೆ ತಮ್ಮ ಹತ್ತಿರ ಬರುವ ಕ್ಲಯಂಟ್ಸ್ ಮೇಲೆ ಹಾಕುತ್ತಾರೆ, ಹಾಗೆಯೇ ಡಾಕ್ಟರ್ಸ್‌ಗಳು ತಮ್ಮ ಹತ್ತಿರಬರುವ ಪೇಷೆಂಟ್ಸ್ ಮೇಲೆ ಹಾಕುತ್ತಾರೆ ಇದರಿಂದ ಈ ತೆರಿಗೆ ಇನ್‌ಡೈರಕ್ಟ್ ಆಗಿ ಬಡ ವರ್ಗದವರ ಮೇಲೆ ಹೊರೆ ಬೀಳುತ್ತದೇ ವಿನಾ ಇನ್ನಾರ ಮೇಲೆ ಬೀಳುವುದಿಲ್ಲ. ಈಗ ತಮ್ಮ ಅಧಿಕಾರ ವರ್ಗವನ್ನೇ ತೆಗೆದುಕೊಳ್ಳಿ. ಅವರಿಗೆ ಸಂಬಳಸಾರಿಗೆ ಸಾಕಾಗುವುದಿಲ್ಲ ಎಂದು ಒಂದುಕಡೆ ಪೇ ಕಮೀಷನ್ ಮಾಡಿದ್ದೀರಿ ಇನ್ನೊಂದು ಕಡೆ ಅವರಿಗೆ ಇಷ್ಟು ಸಂಬಳ ಕೊಡುವಾಗ ಸ್ವಲ್ಪ ಭಾಗ ಟ್ಯಾಕ್ಸ್ ಏತಕ್ಕೆ ಕೊಡಬಾರದು ಎಂದು ಹೇಳುತ್ತೀರಿ. ನೀವು ಹೇಳುವುದು ಒಂದು, ಮಾಡುವುದು ಒಂದು, ಈ ರೀತಿಯಾಗುತ್ತಾ ಇದೆ. ಇದರಿಂದ ಇನ್ನೂ ಜಾಸ್ತಿ ಹೊರೆ ಹೊರುವುದಾದರೆ ಬಡವರ್ಗದವರಿಗೆ ಬಹಳ ತೊಂದರೆಯಾಗುತ್ತದೆ. ಈ ಒಂದು ಟ್ಯಾಕ್ಸ್ 500 ರೂಪಾಯಿ ಮೇಲ್ಪಟ್ಟವರಿಗೆ ಬೀಳುತ್ತದೆ ಎಂದು ಹೇಳಿದ್ದೀರಿ. ಸಾಮಾನ್ಯ 500 ರೂಪಾಯಿ ಬರತಕ್ಕಂಥಾ ಅಧಿಕಾರಿಗಳು ಅಂಥಾ ಅನುಕೂಲ ವರ್ಗದವರಲ್ಲಾ. ಹಾಗೂ ಅಂಥಾ ಅಧಿಕಾರ ವರ್ಗದ ಮೇಲೆ ಹಾಕಬೇಕು ಅನ್ನುವುದಾದರೆ ಒಂದು ಸಾವಿರರೂಪಾಯಿ ಮೇಲ್ಪಟ್ಟು ಬರತಕ್ಕಂಥಾ ಅಧಿಕಾರಿಗಳ ಮೇಲೆ ಹಾಕಿಕೊಳ್ಳಿ. ಅಂಥಾವರು ಕೆಲವರು ಸಿಗಬಹುದು. 500 ರೂಪಾಯಿ ಬರತಕ್ಕಂಥಾವರಿಗೂ ಈ ಒಂದು ಟ್ಯಾಕ್ಸ್ ಹಾಕುವುದಾದರೆ ಅವರು ಬೇರೆ ಇನ್ನೊಂದು ರೀತಿ ಸೋರ್ಸ್‌ನಿಂದ ಹಣ ಪಡೆದು ನಿಮಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದರಿಂದ ಬಡ ಜನಗಳಿಗೆ ತೊಂದರೆಯಾಗುತ್ತದೇ ವಿನಾ ಸುಖವಿರುವುದಿಲ್ಲ. ಈಗ ನೀವು ಲಾಯರ್ಸ್‌ಗೆ, ಡಾಕ್ಟರ್ ಗಳಿಗೆ ಈ ಒಂದು ತೆರಿಗೆಯನ್ನು ಏನು ಹಾಕಿದ್ದೀರಿ, ಇದರಿಂದ ಒಂದು ಸಮಸ್ಯೆ ಉಂಟಾಗುತ್ತದೆ. ದೊಡ್ಡ ದೊಡ್ಡ ಲಾಯರ್ಸ್‌ಗಳಿಗೆ, ನರ್ಸಿಂಗ್ ಹೋಮ್ಸ್‌ಗೆ ಇಂಥಾ ದೊಡ್ಡ ದೊಡ್ಡ ಇನ್‌ಕಂ ರುವವರ ಮೇಲೆ ಈ ತೆರಿಗೆ ಹಾಕಿದರೆ ಅವರಿಂದ ವಸೂಲ್ಮಾಡಬಹುದು, ಆದರೆ ಈ ಸಣ್ಣಪುಟ್ಟ ಲ್ಯಾಯರ್ಸ್ ಮೇಲೆ ಹೆಚ್ಚು ಇನ್‌ಕಂಬರದೇ ಇದ್ದವರ ಮೇಲೆ, ಅವರಿಗೆ ಪ್ರಾಕ್ಟೀಸ್ ಇರಲಿ ಇಲ್ಲದೇ ಇರಲಿ ಅವರುಗಳ ಮೇಲೆ ಈ ಒಂದು ತೆರಿಗೆಯನ್ನು ಹಾಕಿದರೆ ಅವರು ತಮ್ಮ ಒಂದು ವೃತ್ತಿಗೆ ಏನು ಪರ್ಮಿಷನ್ ತೆಗೆದುಕೊಂಡಿದ್ದಾರೋ ಆ ಪರ್ಮಿಷನ್‌ಗೆ ಈ ದುಡ್ಡು ಕಟ್ಟಲೇ ಬೇಕಾಗುತ್ತದೆ. ಇದರಿಂದ ಅವರು ತಮ್ಮ ಸಂಪಾದನೆ ಯಿಂದ ಜೀವನ ಮಾಡಿಕೊಂಡು ಹೋಗಲು ಬಹಳ ಕಷ್ಟಕರವಾಗುತ್ತದೆ. ಇದು ಒಂದು ಹೊರೆಯಾದಂತಾಗುತ್ತದೆ. ಹಾಗೂ ನೀವು ಆ ಸಣ್ಣಪುಟ್ಟ ಲಾಯರ್‌ಗಳ ಮೇಲೆ ಈ ತೆರಿಗೆಯನ್ನು ಹಾಕಬೇಕು ಅನ್ನುವುದಾದರೆ ಅವರು ಏನು ಮಾಡುತ್ತಾರೆ ಎಂದರೆ ತಮ್ಮ ಹತ್ತಿರ ಬರುವ ಕ್ಲಯಂಟ್ಸ್ ಮೇಲೆ ಹಾಕಿ

ವಸೂಲ್ಮಾಡಿ. ನಿಮಗೆ ಕಟ್ಟುತ್ತಾರೆ. ಇದರಿಂದ ಈ ಟ್ಯಾಕ್ಸ್ ಇನ್‌ಡೈರೆಕ್ಟ್ ಆಗಿ ಈ ಬಡವರ್ಗದವರ ಮೇಲೆ ಬೀಳುತ್ತದೆ ಎಂಬು ಹೇಳುತ್ತೇನೆ. ಬೇಕಾದರೆ ನರ್ಸಿಂಗ್ ಹೋಮ್ಸ್ ಡಾಕ್ಟರ್ಸ್ ಇಂಥಾವರ ಮೇಲೆ, ಯಾರು ಈ ತೆರಿಗೆಯನ್ನು ಕೊಡುವುದಕ್ಕೆ ಶಕ್ತಿ ಇರುತ್ತಾರೋ ಅಂಥಾವರ ಮೇಲೆ ಹಾಕಿ. ಅವರು ಕೊಡಲಿ. ಸಣ್ಣಪುಟ್ಟ ಲಾಯರ್ಸ್‌ಗಳ ಮೇಲೆ, ಆಯುರ್ವೇದಿಕ್ ಮತ್ತು ಹೋಮಿಯೋಪಥಿಕ್ ಡಾಕ್ಟರ್ಸ್ ಮೇಲೆ, ಸಣ್ಣಪುಟ್ಟ ಡಾಕ್ಟರ್ಸ್ ಮೇಲೆ ಈ ಒಂದು ತೆರಿಗೆಯನ್ನು ಹಾಕುವುದಾದರೆ ನ್ಯಾಯವಾಗಿ ಹೇಳುವುದಾದರೆ ಅವರು ಈ ತೆರಿಗೆಯನ್ನು ಕೊಡುವುದಿಲ್ಲ, ಅವರು ಏನು ಮಾಡುತ್ತಾರೆ ಎಂದರೆ ಸಾಮಾನ್ಯವಾಗಿ ಎಲ್ಲಾ ಜನರಿಗೂ ಸರ್ಕಾರೀ ಆಸ್ಪತ್ರೆಗಳಲ್ಲಿ ಹೆಚ್ಚಿಗೆ ಸೌಲಭ್ಯಗಳು ಸಿಕ್ಕುವುದಿಲ್ಲ, ಅವರು ಈ ಸಣ್ಣಪುಟ್ಟ ಡಾಕ್ಟರ್ಸ್ ಹತ್ತಿರಕ್ಕೇನೇ ಬರಬೇಕಾಗುತ್ತದೆ. ಆಗ ಅವರು ಆ ರೋಗಿಗಳ ಮೇಲೆ ಈ ಟ್ಯಾಕ್ಸ್ ಹಾಕುತ್ತಾರೆ, ಅವರ ಹತ್ತಿರ ಕಲೆಕ್ಟ್ ಮಾಡಿ ಆ ಹಣವನ್ನು ಸರ್ಕಾರಕ್ಕೆ ಕಟ್ಟುತ್ತಾರೆ. ಆದುದರಿಂದ ಇದು ಸಾಮಾನ್ಯವಾದ ಬಡವರ್ಗದವರ ಮೇಲೆ ಈ ಹೊರೆ ಬೀಳುತ್ತದೇ ವಿನಾ ನೇರವಾಗಿ ಅವರೇ ಈ ತೆರಿಗೆ ಕೊಡುತ್ತಾರೆ ಎಂದು ತಿಳಿದುಕೊಂಡಿದ್ದರೆ ಆ ಭಾವನೆ ಸರಿಯಿಲ್ಲ ಎಂದು ಹೇಳುತ್ತೇನೆ. ಈ ತೆರಿಗೆ ನೇರವಾಗಿ ಅವರಿಗೆ ಬೀಳುವುದಿಲ್ಲ.

ಇನ್ನು ಸೆಲ್ಫ್ ಎಂಪ್ಲಾಯ್ಡ್ ಬಗ್ಗೆ ತೆರಿಗೆ ಹಾಕಿದ್ದೀರಿ. ಸೇಲ್ಸ್‌ಟ್ಯಾಕ್ಸ್ ಟರ್ನ್‌ಓವರ್ ಮೇಲೆ ತೆರಿಗೆ ಹಾಕುತ್ತೇವೆ ಎಂದು ಹೇಳುತ್ತೀರಿ. ಸಾಮಾನ್ಯವಾಗಿ 50 ಸಾವಿರ, 60 ಸಾವಿರ ಒಂದು ಲಕ್ಷ ಟರ್ನ್‌ಓವರ್ ಇರುವಂಥಾವರಿಗೆ ಈ ಟ್ಯಾಕ್ಸ್ ಹಾಕುತ್ತೇವೆ ಅಂತ ಹೇಳುತ್ತೀರಿ. ಇಂಥಾ ಸಣ್ಣಪುಟ್ಟ ವ್ಯಾಪಾರಸ್ಥರ ಮೇಲೆ ಈ ತೆರಿಗೆ ಹಾಕುತ್ತೇವೆ ಅಂತ ಹೇಳುವುದಾದರೆ ಇದೂ ಕೂಡ ಇನ್‌ಡೈರೆಕ್ಟ್ ಆಗಿ ಬಡವರ್ಗದವರ ಮೇಲೆ ಬೀಳುತ್ತದೇ ವಿನಾ ನೇರವಾಗಿ ವ್ಯಾಪಾರಸ್ಥರ ಮೇಲೆ ಬೀಳುವುದಿಲ್ಲ. ಆ ವ್ಯಾಪಾರಸ್ತರು ಏನು ಮಾರಿದರೂ ಏನು ನಷ್ಟವಾದರೂ ಅಥವಾ ಅವರು ಒಂದು ಲೈಟ್ ಛಾರ್ಜ್ ಕಟ್ಟಿದರೂ ಅಥವಾ ಇನ್ನೇನಾದರೂ ಮಾಡಿದರೂ ಇವೆಲ್ಲ ಖರ್ಚು ತೋರಿಸಿ ಅವರ ವ್ಯಾಪಾರದ ಒಂದು ಸೋರ್ಸಸ್ ಮೇಲೆ ಆ ಬಡ ಜನತೆಯಿಂದ ವಸೂಲ್ಮಾಡುತ್ತಾರೇ ವಿನಾ ಅವರಿಗೇನೇ ನೇರವಾಗಿ ಬೀಳುವುದಿಲ್ಲ. ಯಾವುದೇ ಖರ್ಚು ತೆಗೆದುಕೊಂಡರು ಈ ಬಡವರ್ಗದವರ ಮೇಲೇನೇ ಬೀಳುತ್ತದೆ, ನೇರವಾಗಿ ಅವರೇ ಕಟ್ಟುತ್ತಾರೆ ಎಂದು ಭಾವನೆಮಾಡಿಕೊಂಡಿದ್ದರೆ ಅದು ಸರಿಯಿಲ್ಲ ಎಂದು ಹೇಳುತ್ತೇನೆ.

ಇನ್ನು ಅದೇರೀತಿ ಫ್ಯಾಕ್ಟರೀಸ್ ಬಗ್ಗೆ ಹೇಳುವುದಾದರೆ 5 ಜನ ವರ್ಕರ್ಸ್ ಇದ್ದರೆ ಇಷ್ಟು ಕೊಡಬೇಕು, 10 ಜನ ವರ್ಕರ್ಸ್ ಇದ್ದರೆ ಇಷ್ಟು ಕೊಡಬೇಕು ಅಂತ ಏನು ಮಾಡಿದ್ದೀರಿ ಇದರಲ್ಲಿ ತಮಗೆ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರು ಸಾವಿರಾರು ಲೋನ್ ತೆಗೆದುಕೊಂಡು ಅವರ ನಷ್ಟ ಹೊಂದುತ್ತಿರುವಾಗ ಅವರು ತೆಗೆದುಕೊಂಡಂಥಾ ಸಾಲವನ್ನೇ ತೀರಿಸುವುದಕ್ಕೆ ಶಕ್ತಿ ಇಲ್ಲದೇ ಇರುವಾಗ ಅಂಥಾವರ ಮೇಲೂ ಈ ತೆರಿಗೆ ಹಾಕಿದರೆ ಅವರಿಗೆ ಇದರಿಂದ ಹೆಚ್ಚಿನ ಒಂದು ಹೊರೆಯಾಗುತ್ತದೆ ಎಂದು ಹೇಳುತ್ತೇನೆ. ಒಂದು ಕಡೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಎನ್‌ಕರೇಜ್ ಮಾಡುತ್ತೇವೆ ಅಂತ ಹೇಳುವುದು ಇನ್ನೊಂದು ಕಡೆ ಈ ತೆರಿಗೆಗಳನ್ನು ಸೋರ್ಸಸ್ ಹುಡುಕಿ ಇಂಥಾ ತೆರಿಗೆಯನ್ನು ಹಾಕುವುದು. ಈರೀತಿ ಮಾಡಿದರೆ ನಿಜವಾಗಲೂ ಹೇಳುವುದಾದರೆ ಅವರಿಗೆ ಬಹಳ ತೊಂದರೆಯಾಗುತ್ತದೆ ಅದೇರೀತಿ ಷಾಪ್ಸ್‌ಮೇಲೆ ಹೇಳುವುದಾದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಸಣ್ಣಪುಟ್ಟ ಅಂಗಡಿಗಳ ಮೇಲೆ ಈ ತೆರಿಗೆ ಬೀಳುವ ಅವಕಾಶ ಇದೆ. ಈ ಷಾಪ್ಸ್ ಮೇಲೆ ಇಂತಹ ತೆರಿಗೆ ಬೀಳುವುದಾದರೆ ಅವರು ಈ ಬಡವರ್ಗದವರಿಂದ ವಸೂಲ್ಮಾಡಿ ಸರ್ಕಾರಕ್ಕೆ ಕಟ್ಟುತ್ತಾರೇ ವಿನಾ ನೇರವಾಗಿ ಅವರಿಗೇನೇ ಬೀಳುವುದಿಲ್ಲ. ಹೀಗೆ ಪ್ರತಿ ಯೊಂದು ತೆರಿಗೆಯೂ ಕೂಡ ಸಾಮಾನ್ಯ ವರ್ಗದವರ ಮೇಲೇನೇ ಬೀಳುತ್ತದೆ.

ಇನ್ನು ಟ್ಯಾಕ್ಸಿ ಡ್ರೈವರ್ಸ್, ಟ್ರಕ್ಸ್ ಬಸಸ್ ಇಂಥಾವರ ಮೇಲೂ ಈ ತೆರಿಗೆ ಹಾಕಿದ್ದೀರಿ. ಇದೂ ಕೂಡ ಬಡ ವರ್ಗದವರ ಮೇಲೆ ಬೀಳುತ್ತದೆ. ಹೇಗೆಂದರೆ ವೆಹಿಕಲ್ಸ್‌ನಲ್ಲಿ ಗೂಡ್ಸ್ ಸಾಗಿಸುವಾಗ ಏನು ಖರ್ಚು ಬೀಳುತ್ತದೋ ಇದನ್ನು ಸಾಮಾನುಗಳ ರೇಟಿನ ಮೇಲೆ ಹಾಕಿ ಇನ್ನೊಬ್ಬರಿಂದ ವಸೂಲ್ಮಾಡುತ್ತಾರೇ ವಿನಾ ನೇರವಾಗಿ ಅವರಿಗೆ ಬೀಳುವುದಿಲ್ಲ. ಯಾವುದೇ ಟ್ಯಾಕ್ಸ್ ಆಗಲಿ ಬಡವರ್ಗದವರ ಮೇಲೆ ಬೀಳುತ್ತದೇ ವಿನಾ ಇನ್ನಾರ ಮೇಲೂ ಬೀಳುವುದಿಲ್ಲ. ನೀವು ಹೇಳುತ್ತೀರಿ ಟ್ಯಾಕ್ಸ್ ಕೊಡದೇ ಇದ್ದವರಿಗೆ ಶಿಕ್ಷೆ ಇದೆ, 5 ಸಾವಿರ ದಂಡ ಹಾಕುವುದಕ್ಕೆ ಅವಕಾಶ ಇದೆ, ಈ

ಒಂದು ರೂಲನ್ನು ಇದರಲ್ಲಿ ಪ್ರೊವೈಡ್ ಮಾಡಿದ್ದೇವೆ ಎಂದು. ಆದುದರಿಂದ ಇದು ಏನಾಗುತ್ತದೆ ಎಂದರೆ ಚೈತನ್ಯ ಇಲ್ಲದೇಇದ್ದವರ ಈ ತೆರಿಗೆ ಹಾಕಿದರೆ, ಅವರು ಕಟ್ಟದೇ ಹೋದರೆ ಇಂಥಾ ಒಂದು ಘೋರ ಶಿಕ್ಷೆ ಅವರಿಗೆ ಕೊಡುವುದಾದರೆ ಹಿಂದೆ ನಾವು ಚರಿತ್ರೆಯಲ್ಲಿ ಕೇಳುತ್ತಾ ಇದ್ದೆವು ಅನೇಕ ರಾಜರು ತೆರಿಗೆ ಕಟ್ಟದೇ ಕಾಡಿಗೆ ಹೋಗುತ್ತಿದ್ದಾಗ ಆ ಕಾಡಿನಲ್ಲಿ ಭೇಟಿ ಮಾಡಿ ಈ ತೆರಿಗೆಯನ್ನು ವಸೂಲ್ಮಾಡುತ್ತಿದ್ದರು ಎಂದು. ಆ ಒಂದು ಮಟ್ಟಕ್ಕೆ ಈ ಸರ್ಕಾರವೂ ಬರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ನಾನು ಹೇಳುವುದು ಈ ದುರ್ಬಲವರ್ಗದವರ ಮೇಲೆ ಈ ಬಡ ವರ್ಗದವರ ಮೇಲೆ ಹೊರಲಾರದ ಈ ಒಂದು ಹೊರೆ ಹಾಕಿದರೆ. ಈ ಒಂದು ಟ್ಯಾಕ್ಸ್ ಅವರ ಮೇಲೆ ಹಾಕಿದರೆ ಬಹಳ ತೊಂದರೆಯಾಗುತ್ತದೆ ಟ್ಯಾಕ್ಸನ್ನು ಹಾಕಬೇಡಿ ಅಂತ ಹೇಳುವುದಿಲ್ಲ, ಹಾಕಿ, ಯಾರಿಗೆ ಕೊಡುವುದಕ್ಕೆ ಶಕ್ತಿ ಇರುತ್ತದೋ ಅಂಥಾವರ ಮೇಲೆ ಹಾಕಿ, ಇನ್‌ಷೂರೆನ್ಸ್ ಏಜೆಂಟ್ಸ್ ಮೇಲೆ, ಎಸ್ಟೇಟ್ ಏಜೆಂಟ್ಸ್ ಮೇಲೆ ಬ್ರೋಕರ್ಸ್ ಮೇಲೆ ರೇಸ್ ಕ್ಲಬ್‌ಗಳ ಮೇಲೆ ಆಯಿಲ್ ಪಂಪ್ಸ್ ಮೇಲೆ, ಸರ್ವಿಸ್‌ಸ್ಟೇಷನ್ಸ್ ಮೇಲೆ, ಚಿಟ್ ಫಂಡ್‌ ಮೇಲೆ, ಕ್ಯಾಬರೇ ಮೇಲೆ ಹಾಕಿದಿರಿ. ಅದನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ ಸಣ್ಣಪುಟ್ಟ ಡಾಕ್ಟರ್ಸ್ ಲಾಯರ್ಸ್ ಮತ್ತು ಸಣ್ಣಪುಟ್ಟ ವ್ಯಾಪಾರಸ್ಥರ ಮೇಲೆ ಹಾಕಿದರೆ, ಆಯುರ್ವೇದಿಕ್ ಮತ್ತು ಹೋಮಿಯೋಪಥಿಕ್ ಡಾಕ್ಟರ್ಸ್ ಮೇಲೆ ಈ ತೆರಿಗೆ ಹಾಕಿದರೆ ಸೇಲ್ಸ್ ಟ್ಯಾಕ್ಸ್ ಟರ್ನ್ ಓವರ್ ಮೇಲೆ ಹಾಕಿದರೆ ಈ ತೆರಿಗೆ ಬಡವರ್ಗದವರ ಮೇಲೆ ಬೀಳುತ್ತದೆ ವಿನಾನೇರವಾಗಿ ವ್ಯಾಪಾರದ ಮೇಲೆ ಬೀಳುವುದಿಲ್ಲ. ಅವರು ಕೊಡುವುದಿಲ್ಲ. ಫ್ಯಾಕ್ಟರೀಸ್ ಮೇಲೆ ಷಾಪ್ಸ್ ಅಂಡ್ ಎಸ್ಟ್ಯಾಬ್ಲಿಷ್ ಮೆಂಟ್ ಮೇಲೆ ಈ ಟ್ಯಾಕ್ಸ್ ಡ್ರೈವರ್ಸ್ ಮೇಲೆ ಈ ತೆರಿಗೆ ಹಾಕುವುದನ್ನು ನಾನು ವಿರೋಧಿಸುತ್ತೇನೆ. ಈ ತೆರಿಗೆಯೆಲ್ಲಾ ಅಪ್ರತ್ಯಕ್ಷವಾಗಿ ಬಡವರ್ಗದವರಮೇಲೆ ಬೀಳುತ್ತದೆ ವಿನಾ ನೇರವಾಗಿ ವ್ಯಾಪಾರದ ಮೇಲೆ ಬೀಳುವುದಿಲ್ಲ. ಆದುದರಿಂದ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಹಾಗಾದರೆ ಯಾವಯಾವ ಕ್ಯಾಟಗರಿ ಮೇಲೆ ಟ್ಯಾಕ್ಸನ್ನು ಹಾಕಿದರೆ ತಾವು ವಿರೋಧಿಸುವುದಿಲ್ಲ ? ಹೇಳಿ.

ಶ್ರೀ ಎನ್ ವೆಂಕಟಲಿಂಗಯ್ಯ —ನಾನು ಹೇಳುವುದು ಇಷ್ಟೇ 500 ರೂಪಾಯಿ ಮೇಲ್ಪಟ್ಟು ಇರತಕ್ಕಂಥಾ ಅಧಿಕಾರಿಗಳ ಮೇಲೆ ಏನು ಒಂದು ತೆರಿಗೆ ಹಾಕಿದ್ದೀರಿ ಅದು ಸರಿಯೇ ? ಹಾಗೂ ಆ ಅಧಿಕಾರಿಗಳ ಮೇಲೆ ಈ ತೆರಿಗೆ ಹಾಕಬೇಕು ಅನ್ನುವುದಾದರೆ ಒಂದು ಸಾವಿರ ರೂಪಾಯಿ ಮೇಲ್ಪಟ್ಟು ಬರತಕ್ಕಂಥಾ ಅಧಿಕಾರಿಗಳ ಮೇಲೆ ಹಾಕಿಕೊಳ್ಳಿ ಯಾರು ಕೊಡುವುದಕ್ಕೆ ಶಕ್ತಿ ಇರುತ್ತದೋ ಅಂಥಾ ಸ್ವಲ್ಪ ಭಾಗ ಈ ತೆರಿಗೆ ಕೊಟ್ಟರೂ ಪರವಾಯಿಲ್ಲಾ. ಈಗ ನಾಲ್ಕನೇ ಕ್ಲಾಸ್ ಅಫಿಷಿಯಲ್ಸ್ ತೆಗೆದುಕೊಂಡರೆ ಅವನಿಗೂ ಕೂಡ 400-500 ರೂಪಾಯಿ ಬರುತ್ತದೆ. ಒಂದು ಕಡೆ ಅವರಿಗೆ ಪೇ ಸ್ಕೇಲ್ ಹೆಚ್ಚಿಸಬೇಕು ಅಂತ ಹೇಳುತ್ತೀರಿ ಇನ್ನೊಂದು ಕಡೆ ಅವರು ಸ್ವಲ್ಪ ಭಾಗ ಟ್ಯಾಕ್ಸ್ ಕೊಡಲಿ ಎಂದು ಹೇಳುತ್ತೀರಿ ಈ ಒಂದು ನೀತಿ ಸರಿಯಲ್ಲ ಎಂದು ಹೇಳುತ್ತೇನೆ ಇಂಥಾ ವ್ಯತ್ಯಾಸ ಇರುವುದನ್ನು ತಪ್ಪಿಸಬೇಕು. ಮಾನ್ಯ ಸಚಿವರು ಯಾವ ಯಾವ ಕ್ಯಾಟಗರಿ ಮೇಲೆ ಟ್ಯಾಕ್ಸನ್ನು ಹಾಕಿದರೆ ನೀವು ವಿರೋಧ ಮಾಡುವುದಿಲ್ಲ ಎಂದು ಹೇಳಿದ್ದಕ್ಕೆ ಎರಡನೇ ಸಾರಿ ನಾನು ಅದನ್ನು ರಿಪೀಟ್ ಮಾಡುತ್ತೇನೆ ಇನ್‌ಷ್ಯೂರೆನ್ಸ್ ಏಜೆಂಟ್. ಎಸ್ಟೇಟ್ ಏಜೆಂಟ್, ಬ್ರೋಕರ್ಸ್, ರೇಸ್ ಕ್ಲಬ್ಸ್. ಚಿಟ್‌ಫಂಡ್ಸ್ ಕ್ಯಾಬರೇ ಚಿಟ್‌ಫಂಡ್ಸ್ ಸರ್ವಿಸ್ ಸ್ಟೇಷನ್ಸ್ ಇಂಥಾದ್ದರ ಮೇಲೆ ಟ್ಯಾಕ್ಸ್ ಹಾಕಿದರೆ ಬೇಡ ಅನ್ನುವುದಿಲ್ಲ. ಟ್ಯಾಕ್ಸ್ ಕೊಡುವುದಕ್ಕೆ ಶಕ್ತಿ ಇರುವವರ ಮೇಲೆ ಹಾಕಲಿ ಬೇಡ ಅನ್ನುವುದಿಲ್ಲ. ಆದರೆ ಈ ಬಡ ವರ್ಗದವರ ಮೇಲೆ ನಾನು ಮೊದಲೇ ಹೇಳಿದಹಾಗೆ ಲಾಯರ್ಸ್ ಅಲೋಪಥಿಕ್ ಮತ್ತು ಹೋಮಿಯೋಪಥಿಕ ಡಾಕ್ಟರ್ಸ್, ಸಣ್ಣಪುಟ್ಟ ಸಣ್ಣಪುಟ್ಟ ಡಾಕ್ಟರ್ಸ್ ಸಣ್ಣಪುಟ್ಟ ವ್ಯಾಪಾರಸ್ಥರು ಇಂಥಾವರ ಮೇಲೆ ಹಾಕಿದರೆ ಅವರು ಅದನ್ನು ಆ ಬಡವರ್ಗದ ಜನರ ಮೇಲೆ ಹಾಕಿ ಸರ್ಕಾರಕ್ಕೆ ಕಟ್ಟುತ್ತಾರೆ ಹೀಗಾದರೆ ದೇಶದಲ್ಲಿ ಈ ಬಡವರ್ಗದ ಜನ ಬದುಕುವುದು ಹೇಗೆ ? ಈ ಒಂದು ತೆರಿಗೆ ಬಡವರ ಮೇಲೆ ಹೊರ ಲಾರದಂತೆ ಹೊರೆಯಾಗಿದೆ. ಕೊಡುವುದಕ್ಕೆ ಶಕ್ತಿ ಇರುವವರಮೇಲೆ ಇಂಥಾ ಕ್ಯಾಟಗರಿಯನ್ನು ಹುಡುಕಿ ತೆರಿಗೆ ಹಾಕಿದರೆ ನಾನು ಬೇಡ ಅನ್ನುವುದಿಲ್ಲ. ಆದರೆ ಇಲ್ಲಿ ಕೆಲವರ ಮೇಲೆ ಈ ತೆರಿಗೆ ಹಾಕಿರುವುದು

ಬಹಳ ಜಾಸ್ತಿಯಾಯಿತು ಎಂದು ಹೇಳಬೇಕಾಗುತ್ತದೆ. ಮುಖ್ಯವಾಗಿ ಹೇಳಬೇಕೆಂದರೆ, ನಿಮ್ಮ ಕಾಲದಲಿ ಹಾಕಿರುವಷ್ಟು ತೆರಿಗೆಯನ್ನು ಹಿಂದಿನ ಯಾವ ಸರ್ಕಾರಗಳೂ ಜನತೆಯಮೇಲೆ ಹಾಕಿರಲಿಲ್ಲವೆಂದು ಹೇಳಬಹುದು ಆದಕಾರಣ ನಿಮ್ಮ ಸರ್ಕಾರವನ್ನು "ತೆರಿಗೆಗಳ ಒಂದು ಸರ್ಕಾರ" ಎಂದು ಹೇಳಬಹುದು, ಈಗ ತಾವು ದುರ್ಬಲವರ್ಗದವರಿಗೆ ಸಹಾಯ ಮಾಡಲು ಈ ತೆರಿಗೆ ಹಾಕುತ್ತಿದ್ದೇವೆಂದು ಹೇಳುತ್ತಿದ್ದೀರಿ, ಇಲ್ಲಿ ಯುವರೆಗೆ ಅವರಿಗೆ ತಾವು 100 ರೂ. ಗಳಿಂದ 500 ರೂ. ಗಳವರೆಗೆ ಕೊಟ್ಟಂತಹ ಸಹಾಯಧನದಿಂದ ಎಷ್ಟು ಜನರು ಮುಂದೆ ಬಂದಿದ್ದಾರೆಂಬ ಬಗ್ಗೆ ತಾವು ರಾಜ್ಯಾದ್ಯಂತ ಅಂಕಿಅಂಶಗಳನ್ನು ಕಲೆಕ್ಟ್ ಮಾಡಬೇಕು ಏಕೆಂದರೆ ದುರ್ಬಲವರ್ಗದವರನ್ನು ಮೇಲಕ್ಕೆತ್ತಲು ತಾವು ಅವರಿಗೆ ಕುರಿ ಕೋಳಿ, ಹಸ ಮುಂತಾದವನ್ನೆಲ್ಲಾ ಕೊಡುತ್ತಿದ್ದೀರಿ, ಆದರೆ ಎಷ್ಟೋ ಕಡೆಗಳಲ್ಲಿ ಈ ರೀತಿ ಪಡೆದಂಥ ಅನುಕೂಲಗಳನ್ನು ಸದುಪಯೋಗ ಪಡಿಸಿಕೊಳ್ಳದೆ ದುರುಪಯೋಗಪಡಿಸಿಕೊಂಡಿದ್ದಾರೆ. ಮಾತ್ರ ತಾವು ಕೊಡತಕ್ಕಂಥ ಹಣ ಮಧ್ಯ ದಲ್ಲಿಯೇ ಪೋಲಾಗುತ್ತಿದೆ. ಇಲ್ಲಿ ನಾನಾ ರೀತಿಯಿಂದ ತೆರಿಗೆ ಹಾಕಿ, ಆ ಹಣವನ್ನು ಅವರಿಗೆ ಕೊಡುತ್ತೀರಿ, ಆದರೆ ಅದು ಪೋಲಾಗುತ್ತಿದೆ. ಈ ಲೂಪ್-ಹೋಲ್‍ನ್ನು ಪ್ಲಗ್ ಮಾಡಬೇಕು. ಮತ್ತು ತಾವು ಈ ದುರ್ಬಲವರ್ಗದವರಿಗಾಗಿ ಖರ್ಚು ಮಾಡುತ್ತಿರುವ ಕೋಟ್ಯಾಂತರ ರೂ ಗಳು ಸರಿಯಾಗಿ ಖರ್ಚಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಒಂದು ಕಮಿಟಿಯನ್ನು ತಾವು ರಚನೆ ಮಾಡಬೇಕು. ಆಗ ಎಷ್ಟು ಪರ್ಸೆಂಟೇಜ್ ನಷ್ಟು ಹಣ ದುರುಪಯೋಗವಾಗಿದೆ ಎಂಬುದು ತಿಳಿದುಬರುತ್ತದೆ ಈಗ ತಾವು ನೂರರಿಂದ 500 ರೂ. ಗಳವರೆಗೆ ಅವರಿಗೆ ಸಹಾಯ ಮಾಡಿಬಿಟ್ಟರೆ ಅವರನ್ನು ಕೆಳಗಿನಿಂದ ಮೇಲಕ್ಕೆ ಎತ್ತಲು ಸಾಧ್ಯವಾಗುವುದಿಲ್ಲ.

10-30 A M.

ಶ್ರೀ ಕೆ. ಎಚ್. ರಂಗನಾಥ್.—ಈಗ ತರಕಾರಿ ವ್ಯಾಪಾರ ಮಾಡುವವರಿಗೆ 50 ರೂ. ಗಳ ಸಹಾಯ ಕೊಟ್ಟರೆ ಸಾಕಾಗುತ್ತದೆ ಅದೇರೀತಿ ಹಳ್ಳಿಗಳಲ್ಲಿ ಯಾರಾದರು ಒಂದು ಹಸು ಸಾಕುತ್ತೇ ವೆಂದು ಹೇಳಿದರೆ, ಅವರಿಗೆ 300 ರಿಂದ 400 ರೂ. ಗಳವರೆಗೆ ಸಹಾಯಮಾಡಿದರೆ ಸಾಕಾಗುತ್ತದೆ, ಇಂತಹವರಿಗೆ ಒಂದು ಸಾವಿರ ರೂ ಗಳ ಸಹಾಯ ಬೇಕಾಗುವುದಿಲ್ಲ,

ಶ್ರೀ ಎಂ, ವೆಂಕಟಲಿಂಗಯ್ಯ.—ಕೆಲವರು ತರಕಾರಿ ವ್ಯಾಪಾರ ಮಾಡಲು 50 ರೂಪಾಯಿ ಅಥವಾ ನೂರುರೂಪಾಯಿಗಳನ್ನು ಪಡೆದುಕೊಂಡು ದುರುಪಯೋಗ ಮಾಡಿಕೊಂಡಿದ್ದಾರೆ. ಕುಡಿದು ಹಾಳು ಮಾಡಿದ್ದಾರೆ. ಕೆಲವರು ಅಂಗಡಿ ಇಡುತ್ತೇವೆಂದು ಹೇಳಿ ಸಾಲ ಪಡೆದುಕೊಳ್ಳುತ್ತಾರೆ, ಆದರೆ ಅಲ್ಲಿ ಅಂಗಡಿಯೇ ಇರುವುದಿಲ್ಲ, ಮತ್ತು ಅವರ ಅಡ್ರಸ್ಸೇ ಪತ್ತೆಯಿರುವುದಿಲ್ಲ, ಈ ರೀತಿ ಯಿಂದ ಹಣ ಪೋಲಾಗುತ್ತಿದೆ. ತಾವೇನೋ ಹಣದ ಸಹಾಯ ಮಾಡುತ್ತೀರಿ, ಆದರೆ ಅದು ಸರಿ ಯಾಗಿ ಉಪಯೋಗವಾಗಿದೆಯೇ ಎಂಬುದನ್ನು ನೋಡುತ್ತಿಲ್ಲ, ಇಲ್ಲಿಯವರೆಗೆ ತಾವು ರಾಜ್ಯಾದ್ಯಂತ ಏನು ಕೋಟ್ಯಾಂತರ ರೂ. ಗಳನ್ನು ಈ ಉದ್ದೇಶಕ್ಕಾಗಿ ಕೊಟ್ಟಿದ್ದೀರಿ ಅದು ಎಷ್ಟರಮಟ್ಟಿಗೆ ಉಪಯೋಗವಾಗಿದೆ ಎಂಬುದನ್ನು ನೋಡಲು ಒಂದು ಕಮಿಟಿಯನ್ನು ರಚನೆ ಮಾಡಿ, ಅವರಿಂದ ವರದಿ ತರಿಸಿಕೊಂಡು ನೋಡಿ, ನಿಜವಾಗಿಯೂ ಆ ಹಣ ಸದುಪಯೋಗವಾಗುತ್ತಿದ್ದರೆ ಇನ್ನು ಮುಂದೆಯೂ ಸಹಾಯ ಮಾಡಿ, ಆದರೆ ನನಗೆ ತಿಳಿದಂತೆ 25 ರಿಂದ 50 ಪರ್ಸೆಂಟ್‍ವರೆಗೆ ತಾವು ಕೊಟ್ಟ ಹಣ ಪೋಲಾಗುತ್ತಿದೆ

ಶ್ರೀ ಕೆ. ಎಚ್. ರಂಗನಾಥ್.—ಕೆಲವರು ಕೋಅಪರೇಟಿವ್ ಸೊಸೈಟಿಗಳಲ್ಲಿ ಕಡಿಮೆ ಬಡ್ಡಿಯಲ್ಲಿ ಸಾಲ ಪಡೆದುಕೊಂಡು, ಅದನ್ನು ಜಾಸ್ತಿ ಬಡ್ಡಿಗೆ ಕೊಟ್ಟು ಹಣ ಸಂಪಾದನೆ ಮಾಡುತ್ತಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವೆಂಕಟಲಿಂಗಯ್ಯ —ಅಂತಹವರನ್ನು ಬಲಿ ಹಾಕಿ, ಆದರೆ ತಾವು ಕೊಟ್ಟ ಹಣ ಎಲ್ಲೆಲ್ಲಿ ದುರುಪಯೋಗವಾಗಿದೆ ಎಲ್ಲೆಲ್ಲಿ ಸದುಪಯೋಗಪಡಿಸಿಕೊಂಡಿದ್ದಾರೆಂಬ ಬಗ್ಗೆ ಪರಿಶೀಲನೇ ಮಾಡಬೇಕು. ಈಗ ತಾವು ಶಕ್ತಿ ಯಿರುವವರ ಮೇಲೆ ತೆರಿಗೆ ಹಾಕುತ್ತಿದ್ದೀರಿ, ಆ ಹಣವನ್ನು ತಾವು ಬಡವರಿಗಾಗಿ ಉಪಯೋಗ ಮಾಡುವಾಗ, ಅವರು ಅದನ್ನು ಸರಿಯಾಗಿ ಉಪಯೋಗಿಸಿ

ಕೊಳ್ಳದಿದ್ದರೆ ಶಕ್ತಿಯಿರುವವರ ಮೇಲೆ ತೆರಿಗೆ ಹಾಕಿ ಏನು ಪ್ರಯೋಜನ ? ಇದರಿಂದ ಬಡವರನ್ನು ಮೇಲಕ್ಕೆ ಎತ್ತಿದಂತೆ ಆಗಲಿಲ್ಲ, ಮತ್ತು ಶಕ್ತಿಯಿರುವವರ ಮೇಲೆ ತೆರಿಗೆಗಳನ್ನು ಹಾಕಿ ಅವರನ್ನು ಸಹ ಕೆಳಮಟ್ಟಕ್ಕೆ ಇಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂಬುದೇ ನಮ್ಮ ಆಕ್ಷೇಪಣೆಯಾಗಿದೆ.

ಶ್ರೀ ಕೆ. ಎಚ್. ರಂಗನಾಥ್ —ಬಡವರ ಮೇಲೆ ತಮಗೆ ಕರುಣೆ ಇರಲಿ, ಯಾರೋ ಒಬ್ಬರು ಹಣವನ್ನು ದುರುಪಯೋಗಪಡಿಸಿಕೊಂಡರೆ, ತಾವು ಅದನ್ನು ಜನರಲ್ ಆಗಿ ಹೇಳುವುದುಸರಿಯೇ ?

ಶ್ರೀ ಎಂ. ವೆಂಕಟಲಿಂಗಯ್ಯ.—ಬಡವರ ಮೇಲೆ ನಮಗೂ ಅನುಕಂಪವಿದೆ. ಅದಕ್ಕಾಗಿಯೇ ನಾನು ಹೇಳುತ್ತಿರುವುದು ಅವರಿಗಾಗಿ ತಾವು ಖರ್ಚು ಮಾಡಿದಂತ ಹಣದಲ್ಲಿ ಎಷ್ಟು ಸದುಪಯೋಗ ವಾಗಿದೆ ಎಂಬ ಬಗ್ಗೆ ತನಿಖೆ ಮಾಡಲು ಒಂದು ಕಮಿಟಿ ರಚನೆ ಮಾಡಿ ಎಂದು, ಒಂದು ಕಡೆ ತೆರಿಗೆ ಹಾಕಿದ ಮೇಲೆ, ಆ ಹಣ ಸದುಪಯೋಗವಾಗದಿದ್ದರೆ, ಬಡವರು ಉದ್ಧಾರವಾಗುವುದಿಲ್ಲ, ತೆರಿಗೆ ಕೊಟ್ಟವರೂ ಸಹ ಬಡವರಾಗುತ್ತಾರೆ.

ಶ್ರೀ ಬಿ. ಎನ್. ಪಾಟೀಲ್.—ಈ 50 ಅಥವಾ ನೂರು ರೂಪಾಯಿಗಳ ಸಾಲವನ್ನು ಕಳೆದ ಒಂದೆರಡು ವರ್ಷಗಳಿಂದ ಕೊಡಲಾಗುತ್ತಿದೆಯೇ ಹೊರತು ನೂರಾರು ವರ್ಷಗಳಿಂದ ಕೊಟ್ಟು ಕೊಂಡು ಬಂದಿಲ್ಲ, ಮತ್ತು ಇದೇ ರೀತಿ ಕೊಟ್ಟ ಹಣ ದುರುಪಯೋಗವಾಗಿರುವುದು ಬಹಳ ಕಡಿಮೆ ಎಂದು ಹೇಳಬಹುದು.

ಶ್ರೀ ಎಂ ವೆಂಕಟಲಿಂಗಯ್ಯ.—ಅದರಿಂದ ಬಡವರಿಗೆ ಎಷ್ಟರಮಟ್ಟಿನ ಪ್ರತಿಫಲ ದೊರಕಿದೆ ಎಂಬುದನ್ನು ಕಂಡುಹಿಡಿಯಲು ರಾಜ್ಯಮಟ್ಟದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಎಂ. ವೈ. ಘೋರ್ಪಡೆ.—ಕೆಲವು ಸಲ ಮೇಲ್ಮಟ್ಟದಲ್ಲಿ ಹಣ ದುರುಪಯೋಗವಾಗುವುದುಂಟು, ಮತ್ತು ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಸಹ ಹಣ ದುರುಪಯೋಗವಾಗುವುದುಂಟು ಅಂದ ಮಾತ್ರಕ್ಕೆ ಆ ಸೊಸೈಟಿಗಳಿಗೆ ಹಣ ಕೊಡುವುದನ್ನು ನಿಲ್ಲಿಸುವುದಕ್ಕಾಗುತ್ತದೆಯೇ ಮತ್ತು ಒಂದು ಕಾಸನ್ನೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಂ. ವೆಂಕಟಲಿಂಗಯ್ಯ.—ಕೋ-ಆಪರೇಟೀವ್ ಸೊಸೈಟಿಗಳ ಮೂಲಕ ಬಡವರಿಗೆ ಹಣದ ಸಹಾಯ ಮಾಡಬೇಕೆಂದು ತಾವು ಹೊರಟಿರುವುದನ್ನು ನಾವು ವಿರೋಧ ಮಾಡುತ್ತಿಲ್ಲ ತಮ್ಮ ಒಂದು ಪಾಲಿಸಿಯನ್ನು ನಾವು ಒಪ್ಪುತ್ತೇವೆ, ಆದರೆ ತಾವು ಕೊಟ್ಟ ದುಡ್ಡು ಜನರಿಗೆ ಸರಿಯಾಗಿ ಹೋಗಿ ಮುಟ್ಟುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ನೋಡಬೇಕು, ಈಗ ತಾವು ಕೊಡುತ್ತಿರುವ ಹಣದಿಂದ ಬಡವರಿಗೆ ಯಾವ ರೀತಿಯಿಂದಲೂ ಪ್ರಯೋಜನವಾಗುತ್ತಿಲ್ಲ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಎಚ್. ರಂಗನಾಥ್ —ಹಾಗೆಂದು ಹಣ ಕೊಡುವುದನ್ನು ನಿಲ್ಲಿಸುವುದಕ್ಕಾಗುತ್ತದೆಯೆ?

ಶ್ರೀ ಎಂ ವೆಂಕಟಲಿಂಗಯ್ಯ.—ನಿಲ್ಲಿಸಬೇಡಿ, ಆದರೆ ತಾವು ಕೊಟ್ಟ ಪರ್ಪಸ್ ಸರ್ವ್ ಆಗಿಲ್ಲ ಎಂದು ನಾನು ಹೇಳುತ್ತಿರುವುದು, ಅವರ ಜೀವನ ಮಟ್ಟವನ್ನು ಉತ್ತಮಪಡಿಸಬೇಕೆಂದು ತಾವು ಹಣದ ಸಹಾಯ ಮಾಡುತ್ತೀರಿ, ಆದರೆ ಅದು ಸಾಧ್ಯವಾಗದಿದ್ದರೆ ತಾವು ಹಣ ಕೊಟ್ಟೂ ಸಹ ಏನು ಪ್ರಯೋಜನ? ಯಾವ ಉದ್ದೇಶಕ್ಕಾಗಿ ನೀವು 5 ಅಥವಾ ನೂರು ರೂ. ಗಳನ್ನು ಕೊಡುತ್ತೀರೋ, ಅದನ್ನು ಅವರು ಸದುಪಯೋಗಪಡಿಸಿಕೊಳ್ಳದಿದ್ದರೆ, ಅವರ ಜೀವನ ಮಟ್ಟವೂ ಸಹ ಮೇಲಕ್ಕೆ ಬರುವುದಿಲ್ಲ ನಿಮ್ಮ ದುಡ್ಡೂ ಸಹ ಉಳಿಯುವುದಿಲ್ಲ ಈ ಕಾರಣದಿಂದಲೇ ನಾನು ಹೇಳಿದ್ದು, ಒಂದು ಕಮಿಟಿಯನ್ನು ರಚನೆಮಾಡಿ, ಅದರ ಮೂಲಕ ತಾವು ಕೊಟ್ಟ ಹಣ ಎಷ್ಟು ಪೋಲಾಗಿದೆ, ಎಷ್ಟು ಉಪಯೋಗವಾಗಿದೆ ಎಂಬುದನ್ನು ತನಿಖೆ ಮಾಡಿಸಿ ಎಂದು ನಾನು ಹೇಳಿದ್ದು, ಆ ಹಣವೇನಾದರೂ ಸದುಪಯೋಗವಾಗಿದ್ದರೆ, ಕೊಡತಕ್ಕಂಥ ಶಕ್ತಿಯಿರುವವರ ಮೇಲೆ ತೆರಿಗೆ ಹಾಕಿ ನಾವು ಬೇಡ ಎಂದು ಹೇಳುವುದಿಲ್ಲ, ಮತ್ತು ಆ ಬಗೆ ನಮ್ಮ ಅಭ್ಯಂತರ ವೇನೂ ಇಲ್ಲ, ಆದರೆ ಕೆಲವರ ಮೇಲೆ ಈ ಪ್ರೊಫೆಷನಲ್ ಟ್ಯಾಕ್ಸ್ ನ್ನು ಹಾಕುವುದು ಬೇಡ ಎಂದು

ನಾನು ಮೊದಲೇ ಹೇಳಿದ್ದೇನೆ. ಅದರಂತೆ ಅದನ್ನು ಮಾನ್ಯ ಮಂತ್ರಿಗಳು ಪುನರ್ವಿಮರ್ಶೆ ಮಾಡು ವುದರ ಮೂಲಕ ಅದರ ಮೇಲಿನ ತೆರಿಗೆಯನ್ನು ಕೈ ಬಿಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸು ಮತ್ತು ವಸತಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಪ್ರೊಫೆಷನಲ್ ಟ್ಯಾಕ್ಸ್ ಮೇಲೆ ಸ್ವಾಭಾವಿಕವಾಗಿ ಸಾಕಷ್ಟು ಚರ್ಚೆ ಯಾಗಿದೆ. ಇಷ್ಟೊಂದು ಚರ್ಚೆಯಾಗಬೇಕೆಂಬ ಉದ್ದೇಶದಿಂದಲೇ ನಾವು ಇಲ್ಲಿಯವರೆಗೆ ಇದನ್ನು ಲೇಫೂ ಮಾಡದೆ, ಇಲ್ಲಿ ಚರ್ಚೆಯಾದ ನಂತರ ಜಾರಿಗೆ ಕೊಡಬೇಕು ಎಂಬುದು ಸರ್ಕಾರದ ಸ್ಪಷ್ಟವಾದ ಉದ್ದೇಶವಾಗಿತ್ತು. ಇದು ಒಂದು ಮುಖ್ಯವಾದಂಥ ತೆರಿಗೆಯ ವ್ಯವಸ್ಥೆಯಾಗಿದೆ ಆದಕಾರಣ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗದೆ, ಇದನ್ನು ಕಾರ್ಯಗತ ಮಾಡಬಾರದೆಂಬ ಮನಸ್ಸು ಸರ್ಕಾರಕ್ಕೆ ಇತ್ತು, ಅದರ ಪ್ರಕಾರ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದು ಸಂತೋಷದ ವಿಷಯ. ಇದಕ್ಕೆ ಉತ್ತರ ಹೇಳಬೇಕಾದರೆ, ಅದು ಅಷ್ಟೊಂದು ನಾವು ಭಯಪಡಬೇಕಾದಂಥ ತೆರಿಗೆಯಾಗಿಲ್ಲ, ಮತ್ತು ಇದೇನೂ ಹೊಸ ವಿಚಾರವಲ್ಲ, ಇದು ಒಂದು ಹಳೆಯ ವಿಚಾರವೇ ಆಗಿದೆ. ಇದಕ್ಕೆ ನಾವು ಒಂದು ಕಾಯಕಲ್ಪ ಕೊಟ್ಟು ಇದರ ಒಂದು ವ್ಯಾಪ್ತಿಯನ್ನು ನಾವು ಜಾಸ್ತಿ ಮಾಡುತ್ತಿದ್ದೇವೆ. ಆದ್ದರಿಂದ ನಾವು ಹೊಸದಾಗಿ ಎಕ್ಸ್‌ಪೆರಿಮೆಂಟ್ ಮಾಡುತ್ತಿದ್ದೇವೆ, ಸಾಕಷ್ಟು ಯೋಚನೆ ಮಾಡದೆ ಇದನ್ನು ಜಾರಿಗೆ ಕೊಡು ತ್ತಿದ್ದೇವೆಂದು ಹೇಳುವುದಕ್ಕೆ ಅಷ್ಟೊಂದು ಆಸ್ಪದವಿಲ್ಲ, ನಾನು ಮೊದಲೇ ಹೇಳಿದಂತೆ ಇದೇನೂ ಹೊಸ ವಿಚಾರವಲ್ಲ, ಇದು ಹಳೆಯ ವಿಚಾರ, ಇದು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಸರಿ ಯಾಗಿ ಕಾರ್ಯಗತವಾಗದೆ ಕೊಳೆಯುತ್ತಿತ್ತು, ಈ ರೀತಿಯಿಂದ ಕೊಳೆಯಬಾರದು, ಇದರಿಂದ ನಮ್ಮ ರಾಜ್ಯಕ್ಕೆ ಯಾವರೀತಿಯಿಂದಲಾದರೂ ಉಪಯೋಗವಾಗಬೇಕೆಂಬ ದೃಷ್ಟಿಯಿಂದ, ರಾಜ್ಯದ ಮಟ್ಟದಲ್ಲಿ ಈ ಟ್ಯಾಕ್ಸನ್ನು ಪುನಃ ವಸೂಲಿ ಮಾಡಲು ಇದಕ್ಕೆ ಒಂದು ಜೀವಕಳೆ ಕೊಡುತ್ತಿದ್ದೇವೆ.

ನಾವು ಈ ಟ್ಯಾಕ್ಸನ್ನು ಏತಕ್ಕೋಸ್ಕರ ಹಾಕುತ್ತಿದ್ದೇವೆಂದರೆ. ಒಂದು ಒಳ್ಳೆಯ ಉದ್ದೇಶಕ್ಕೋಸ್ಕರ ಹಾಕುತ್ತಿದ್ದೇವೆ. ಅದು ಏನೆಂದರೆ ನಾವು ಜನತಾ ಗೃಹ ನಿರ್ಮಾಣ ಯೋಜನೆಯನ್ನು ಏನು ಪ್ರಾರಂಭ ಮಾಡಿದ್ದೇವೆ, ಅದರ ಬಗ್ಗೆ ಇನ್ನೂ ಸಾಕಷ್ಟು ಹೆಚ್ಚು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ವರ್ಷೇ ವರ್ಷೇ ಹೆಚ್ಚು ಹೆಚ್ಚು ಹಣ ಖರ್ಚಾಗುತ್ತಿದೆ, ಆ ರೀತಿ ಹೆಚ್ಚು ಖರ್ಚು ಮಾಡಬೇಕೆಂದು ಸರ್ಕಾರದವರ ಉದ್ದೇಶವಿದೆ. ನಾವು ಪ್ಲಾನಿಂಗ್ ಕಮಿಷನ್ ಮಟ್ಟದಲ್ಲಿ ಹೋದಾಗ ಅಲ್ಲಿ ಪ್ರಯಾರಿಟಿ ಮೇಲೆ ತೀರ್ಮಾನವಾಗುತ್ತದೆ. ಆವಾಗ ಕೂಡ ನಾವು ಈ ಜನತಾ ಗೃಹ ನಿರ್ಮಾಣ ಕಾರ್ಯಕ್ರಮಕ್ಕೆ 4 ಕೋಟಿ ರೂ. ಸಾಲದು, ಜಾಸ್ತಿ ಮಾಡಬೇಕೆಂದು ಹೇಳಿದೆವು. ಅವರು ನೀರಾ ವರಿ ಮೇಲೆ, ವಿದ್ಯುಚ್ಛಕ್ತಿಯ ಮೇಲೆ ಹೆಚ್ಚು ಖರ್ಚು ಮಾಡಿರಿ ಎಂದು ಹೇಳುತ್ತಾರೆ. ಆದುದರಿಂದ ಇವತ್ತು ನಮ್ಮ ದೃಷ್ಟಿಯಿಂದ, ರಾಜ್ಯ ಸರ್ಕಾರದ ದೃಷ್ಟಿಯಲ್ಲಿ, ಕರ್ನಾಟಕ ಜನತೆಯ ದೃಷ್ಟಿ ಯಲ್ಲಿ ಈ ಜನತಾ ಗೃಹ ನಿರ್ಮಾಣ ಯೋಜನೆ ಏನಿದೆ ಅದು ಬಹಳ ಪ್ರಾಮುಖ್ಯವಾದಥದ್ದು ಇದು ಅತಿ ಪ್ರಾಮುಖ್ಯವಾದಂಥದ್ದು ಎನ್ನುವುದನ್ನು ಎತ್ತಿ ತೋರಿಸುವ ದೃಷ್ಟಿಯಿಂದ ಕೂಡ ಈ ರೀತಿ ಟ್ಯಾಕ್ಸ್‌ಗಳನ್ನು ಹಾಕುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ತೆರಿಗೆಯಿಂದ ಬರತಕ್ಕ ಹಣವನ್ನು ಏತಕ್ಕೋಸ್ಕರ ಬಳಸುತ್ತಿದ್ದೀರಿ ಎಂಬುದನ್ನು ನೀವು ಎಲ್ಲಿಯೂ ಹೇಳಿಲ್ಲ ಏತಕ್ಕೆ?

ಶ್ರೀ ಎಂ. ವೈ. ಘೋರ್ಪಡೆ.—ಬಡ್ಜೆಟ್ ಭಾಷಣದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನೀವು ಬಡ್ಜೆಟ್ ಕಾಪಿಯಲ್ಲಿ ಹೇಳಿರುವುದನ್ನು ಓದದೇ ಹೋದರೆ ಏನು ಪ್ರಯೋಜನ? ನಾನ್ ಹೇಳದ್ದನ್ನೇ ಹೇಳುವುದಕ್ಕೆ ಹೋದರೆ ಅಧ್ಯಕ್ಷರು ಆ ರೀತಿ ಹೇಳಿದ್ದನ್ನೇ ಹೇಳಬಾರದು, ರಿಪೀಟು ಮಾಡಬಾರದೆಂದು ಹೇಳುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರ ಮಾತನಾಡುತ್ತಾ, 'ಯಾವ ಉದ್ದೇಶಕ್ಕೋಸ್ಕರ ಈ ತೆರಿಗೆಯ ಹಣವನ್ನು ಖರ್ಚು ಮಾಡುತ್ತಾರೆ ಎಂಬುದೇ ಗೊತ್ತಿಲ್ಲ' ಎಂದು ಹೇಳಿದರು. ಅದಕ್ಕೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಈ ಜನತಾ ಗೃಹ ನಿರ್ಮಾಣ ಯೋಜನೆಗೆ ನಾವು ಹೋದ ವರ್ಷ 4 ಕೋಟಿ ಖರ್ಚುಮಾಡಿದ್ದರೆ ಈ ವರ್ಷ 8 ಕೋಟಿ ಖರ್ಚುಮಾಡುತ್ತಿದ್ದೇವೆಂದು......

ಶ್ರೀ ಕೋಣಂದೂರು ಲಿಂಗಪ್ಪ.—ತಾವು ತಂದಿರತಕ್ಕಂಥ ವಿಧೇಯಕದಲ್ಲಿ, ಯಾವ ಉದ್ದೇಶಕ್ಕೋಸ್ಕರ ಹಣವನ್ನು ಖರ್ಚು ಮಾಡುತ್ತೀರಿ ಎಂಬುವುದನ್ನು ಹೇಳಿಲ್ಲ.

ಶ್ರೀ ಎಂ ವೈ ಘೋರ್ಪಡೆ.—ವಿಧೇಯಕದಲ್ಲಿ ಇರಬೇಕಾದ್ದು ಏನೂ ಇಲ್ಲ. ಬಡ್ಜೆಟ್ ಭಾಷಣದಲ್ಲಿ ನಾನು ಆಗಲೇ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಬೇರೆ ಬೇರೆ ತೆರಿಗೆಗಳನ್ನು ಹಾಕಲು ತಿದ್ದುಪಡಿಗಳನ್ನು ಇಲ್ಲಿ ತಂದಾಗ ಅದರ ಉದ್ದೇಶ, ಅವರ ಹಣವನ್ನು ಏತಕ್ಕೋಸ್ಕರ ಖರ್ಚು ಮಾಡುತ್ತೀರಿ ಎಂಬುದನ್ನೆಲ್ಲಾ ಹೇಳಿದ್ದೀರಿ ಅದೇ ರೀತಿ ಇದರ ಬಗ್ಗೆ ಕೂಡ ತಾವು ಹೇಳಬಹುದಾಗಿತ್ತು.

ಶ್ರೀ ಎಂ. ವೈ. ಘೋರ್ಪಡೆ.—ನಾನು ಈಗಾಗಲೇ ಹೇಳಿರುವ ಹಾಗೆ, ಬಡ್ಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಪುನಃ ಈಗ ಪ್ರತಿಯೊಂದು ವಿಷಯದ ಬಗ್ಗೆಯೂ, ಫುಲ್ ಸ್ಟಾಪ್, ಕಾಮಾ ಬಗ್ಗೆ ಹೇಳಬೇಕಾದದ್ದು ಏನೂ ಇಲ್ಲ, ಹೋದವರ್ಷ ಜನತಾ ಗೃಹ ನಿರ್ಮಾಣ ಯೋಜನೆಗಾಗಿ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೆವು ಈ ವರ್ಷ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೋಸ್ಕರ ಉಪಯೋಗಿಸುತ್ತಿದ್ದೇವೆಂದು ಹೇಳಿದ್ದೇನೆ. ನಾನು ಹೀಗೆ ಮಾಡುವಾಗ ಆದಷ್ಟು ಮಟ್ಟಿಗೆ ತೆರಿಗೆ ಕೊಡಲು ಶಕ್ತಿ ಇರುವಂಥ ಜನರಿಂದ ವಸೂಲು ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ. ತೀರಾ ಬಡತನದಲ್ಲಿರತಕ್ಕಂಥವರಿಗೆ ಭಾರ ಆಗಬಾರದು ಎನ್ನುವ ಉದ್ದೇಶದಿಂದ ಹೊಸ ರೀತಿಯಲ್ಲಿ ಕೊಡಲು ಶಕ್ತರಿರುವಂತವರಿಂದ ತೆರಿಗೆಯನ್ನು ವಸೂಲು ಮಾಡಲು ಈ ರೀತಿ ವಸೂಲು ಮಾಡುತ್ತಿದ್ದೇವೆ ಲೋಕಲ್ ಬಾಡೀಸ್ ವಿಷಯದ ಬಗ್ಗೆ ಮಾನ್ಯ ಶ್ರೀ ಶಾಮಣ್ಣನವರು ಹೇಳಿದರು ಬೇರೆ ಬೇರೆ ಪಾಯಿಂಟ್‌ಗಳಿಗೆ ಉತ್ತರ ಕೊಡುವುದಕ್ಕಿಂತ ಮುಂಚೆ ಇನ್ನೊಂದು ಮೂಲಭೂತವಾದಂಥ ವಿಷಯ ಇಲ್ಲಿ ಚರ್ಚೆಗೆ ಬಂದಿದೆ. ಅದು ಏನೆಂದರೆ ಆರ್ಟಿಕಲ್ 21 ಇವೆ ಅದರ ಪ್ರಕಾರ ಈ ರೀತಿ ಟ್ಯಾಕ್ಸನ್ನು ಕಲೆಕ್ಟ್ ಮಾಡುವುದಕ್ಕೆ ಅಧಿಕಾರವಿಲ್ಲ, ಅವಕಾಶವಿಲ್ಲವೆಂದು ಹೇಳಿದರು. ಶ್ರೀ ಕಾಗೋಡು ತಿಮ್ಮಪ್ಪನವರು ಲೀಗಲ್ ನಾಲೆಡ್ಜ್ ಉಪಯೋಗಿಸಿ ಇಂಥ ಒಂದು ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ನಾವು ಇಂಥ ಒಂದು ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಇದರ ಬಗ್ಗೆ ನಾವು ಸಾಕಾದಷ್ಟು ಲೀಗಲ್ ಒಪೀನಿಯನ್ ತೆಗೆದುಕೊಂಡಿದ್ದೇವೆ. ನಾವು ಈ ರೀತಿ ಅಧಿಕಾರವನ್ನು ತೆಗೆದುಕೊಳ್ಳುವುದರಲ್ಲಿ ಕಾನ್ಸ್ಟಿಟ್ಯೂಷನ್ನಿನ ದೃಷ್ಟಿಯಿಂದ ಯಾವ ಒಂದು ಆತಂಕವೂ ಇಲ್ಲವೆಂದು ಸ್ಪಷ್ಟವಾಗಿ ಲೀಗಲ್ ಒಪೀನಿಯನ್ ಇದೆ.

Article 245 of the constitution gives powers to Central and State Governments to pass such laws and to impose tax. There is no unconstitutional delegation involved. The question is whether this delegation of authority, *i.e.*, giving the power to Government to announce certain other categories by notification is not unreasonable or unconstitutional. The power to impose and assess a tax is essentially a legislative function. Here 'the following are not essential legislative functions and may be delegated.' What are those functions which are not essential and which can be delegated ? 'The power to select the persons on whom the tax is to be laid.' This is not an essential point as long as you lay down what is the maximum tax to be levied.

SRI M. S. KRISHNAN.—Article 265 clearly says what are the delegated powers and what are the functions of the Government while levying taxes?

SRI M. Y. GHORPADE — Assessing and taxing is essntially a legislative function. On the other hand-the following are not essential legislative functions' and may be delegated; the power to select the persons on whom the tax is not be laid: the power to amend the schedule of exemptions, the determmination of the rates at which it is to be charged in respect of different classes of goods the choise of the particular tax suited to the purposes of the Act and with in the competence of the Legislarure concerned, the setting up of the machinary for collection of tax.' We cannot levy more than a certain amount. There is some limitation about which the Legislation can be made and there is nothing wrong in doing so. There is an amendment to be moved in this bill. We are going to move it. It is therefore not unconstitutional for the legislature to delegate power to Government to make such laws which are fully in keeping with the spirit of the structure of the Bill. Therefore, legally we are correct.

SRI M. S. KRISHNAN.—It is advantageous to take legal opinion. To my little knowledge, it strikes me that it is not constitutional Articles 265 is supporting my agrument It reads as follows :

> 'Where a tax or other compulsory levy is sought to be imposed by a statatory instrument, its validity has to be tested by the doctrine of ultra vires which applies to all subordinate legislation. It follows from this doctrine that taxation in order to be valid, must not only be authorised by a statute, but must also be levied or collected in strict conformity with the statute which authorises it, Hence on tax can be imposed by any bye-law, rule or regulatiade unless the statute under which the legislation is made specifically authorises the imposition.on.'

It has been commented by Sri Basu on whom tax should be levied. But you are saying that youcan levy tax on anybody.

SRI M. Y. GHORPADE —The point is what I am referring to deals specifically with the question before us. What is the interpretation to the things which can be delegated ? After all, when you come to delegation, certain legal decision have to be taken into consideration as to what has to be considered delegatable and what is considered essential not delegatable. Mr. Basu the well known commentator says specifically the power is not essential Legislative function which cannot be delegated. Supposing you want to amend the schedule, it is not considered essential Legislative function which cannot be delegated. In other words, since Mr Basu has mentioned these are things which can be delegated I don't think there is any legal bar in taking power to change these things. We have to *build up a lot of* experience.

SRI M. S. KRISHNAN — If you are sure of that particular article, nothing can be stated. The controversy was as to how you can come before this house for the legislation.

MR. DEPUTY SPEAKER.—I am seeing both the Hon'ble Minister and the hon-member are on their legs. The hon' ble the member may please resume his seat.

SRI M. Y. GHORPADE.— It is quite practical to come before the Legislature. Even what is done by notification has to be put before the Assembly. The member are not going to keep quiet if Government is not acting in a legal manner. You have to trust the reasonableness of the Government to some extent.

